Licence No. 60.
Licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. ೮–೦–೦.

ಸಂಪುಟ ೩೧ | ತಾರೀಕು ೧೫–೮–೧೯೫೨ನೇ ಶುಕ್ರವಾರ | ಸಂಚಿಕೆ ೧೧

ಭಾರತದ ವಿದ್ಯಾಮಂತ್ರಿ ಮೌ|| ಅಬುಲ್ ಕಲಂ ಆಜಾದರು.

ಲೇ:—ಶ್ರೀ ವಿ. ಎಸ್. ರಾಮಕೃಷ್ಣ, ಬಿ. ಎಸ್ಸಿ (ಆನರ್ಸ್) ಬಿ. ಟಿ.,

ಭಾರತದ ವಿದ್ಯಾಮಂತ್ರಿ ಮೌಲಾನಾ ಅಬುಲ್‌ಕಲಂ ಆಜಾದರು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ರಾಷ್ಟ್ರದೇವಿಯನ್ನು ಆರಾಧಿಸುತ್ತಿರುವರು. ಆಜಾದರ ದಿನವೂ ಭಾವನಾಪೂರ್ಣವೂ ಆದ ಜೀವನಲಹರಿ ಭಾರತೀಯರ ಅನುಕರಣೆಗೆ ಸರ್ವವಿಧದಿಂದಲೂ ಯೋಗ್ಯವಾಗಿರುವುದು. ಮೌಲಾನಾ ಆಜಾದರ ಅಳವಾದ ಜ್ಞಾನವನ್ನೂ ವಿಶಾಲವಾದ ಭಾವನಾವೈಶಿಷ್ಟ್ಯವನ್ನೂ ಅರಿತೇ ಭಾರತದ ಮಹಾನಾಯಕರಾದ ಜವಾಹರಲಾಲರು ಅವರನ್ನು ವಿದ್ಯಾಮಂತ್ರಿಯಾಗಿ ನಿಯಮಿಸಿರುವರು. ಸ್ವತಂತ್ರಭಾರತದ ರಾಷ್ಟ್ರೀಯ ಶಿಕ್ಷಣ ಯೋಜನೆಯನ್ನು ರೂಪಿಸಲು ಮೌಲಾನಾ ಆಜಾದರ ವಿಶಾಲ ರಾಷ್ಟ್ರೀಯ ಭಾವನೆ, ಆಜಲ ದೇಶಪ್ರೇಮ, ಸ್ವಾರ್ಥತ್ಯಾಗ, ತತ್ವಪೂರ್ಣ ಜೀವನಗಳು ಸದಾಕಾಲವೂ ಸಹಕಾರಿಗಳಾಗಿವೆ. ಮೌಲಾನಾ ಆಜಾದರ ವ್ಯಕ್ತಿತ್ವವನ್ನು ಅರಿಯಲು ಆ ನಿರರ್ಗಳವಾದ ಜೀವನಪ್ರವಾಹವನ್ನು ಶೋಧಿಸುವುದು ಉಚಿತವಾಗಿದೆ.

ಮೌಲಾನಾ ಆಜಾದರ ಜನಕರು ಹುಟ್ಟಿ ಭಾರತೀಯರಾದ ಮುಸ್ಲಿಮರು. ಅವರು ಅರೇಬಿಯಾ ದೇಶದ ರಮಣಿಯೊಬ್ಬಳನ್ನು ವಿವಾಹವಾದರು. ಅರೇಬಿಯಾ ದೇಶದ ಆ ಮಹಿಳೆಯು ಗರ್ಭದಲ್ಲಿ ಅಬುಲ್‌ಕಲಾಮ್ ಆಜಾದರು ಮುಸ್ಲಿಮರ ಪವಿತ್ರಯಾತ್ರಾಸ್ಥಳವಾದ ಮಕ್ಕಾಪಟ್ಟಣದಲ್ಲಿ ಕ್ರಿ. ಶ. ೧೮೮೮ರಲ್ಲಿ ಜನಿಸಿದರು. ಅವರು ತಮ್ಮ ಬಾಲ್ಯವನ್ನು ಅರೇಬಿಯಾದೇಶದಲ್ಲೇ ಕಳೆದರು.

ಇಸ್ಲಾಂ ಸಂಸ್ಕೃತಿಯಲ್ಲೇ ಬೆಳೆದ ಆಜಾದರು ಆ ಸಂಸ್ಕೃತಿಯಿಂದಲೇ ಪರಿಪೋಷಿತರಾಗಿ ಇಸ್ಲಾಂ ಧರ್ಮದ ಮೂಲತತ್ವಗಳನ್ನು ಅಳವಾಗಿ ಅಭ್ಯಸಿಸಿದರು. ಈಜಿಪ್ತಿನ ರಾಜಧಾನಿಯಾದ ಕೈರೋನಗರದ ಅಲ್‌ಅಜ್–ಹಾರ್ ವಿದ್ಯಾಪೀಠದಲ್ಲಿ ಅವರು ಅರೇಬಿಯಾ ಪಾರಸೀ ಮುಂತಾದ ಭಾಷೆಗಳಲ್ಲಿ ತಮ್ಮ ಎಳೆವಯಸ್ಸಿನಲ್ಲೇ ಅದ್ಭುತವಾದ ಪಾಂಡಿತ್ಯವನ್ನು ಗಳಿಸಿ ತಮ್ಮ ಪಿತೃದೇಶವಾದ ಭರತಖಂಡಕ್ಕೆ ಆಗಮಿಸಿದರು.

ಭರತಖಂಡಕ್ಕೆ ಆಜಾದರು ಬರುವ ವೇಳೆಗೆ ಭಾರತದ ರಾಜಕೀಯ ಪರಿಸ್ಥಿತಿ ವಿಷಮವಾಗಿದ್ದಿತು. ಭಾರತವನ್ನು ಬ್ರಿಟಿಷರು ತಮ್ಮ ಸಾಮ್ರಾಜ್ಯಬಂಧನದಿಂದ ಬಿಗಿದು ಭಾರತೀಯರನ್ನು ದಾಸ್ಯಸಂಜರದಲ್ಲಿಟ್ಟು ತಮ್ಮ ಅಧಿಕಾರಜಾಲವನ್ನು ಬೀಸಿದ್ದರು. ಬ್ರಿಟಿಷರ ವಿರುದ್ಧವಾಗಿ ಹೋರಾಡಿ ಭರತಖಂಡದ ಕಳೆದುಹೋದ ಸ್ವಾತಂತ್ರ್ಯವನ್ನು ಗಳಿಸಲು ಪ್ರಚಂಡವಾದ ರಾಜಕೀಯ ಕ್ರಾಂತಿ ಎದ್ದಿತ್ತು. ಆಂಗ್ಲ ಶಾಸನದ ವಿರುದ್ಧ ಹೋರಾಟ ಪಡೆಸಲು ಸಿದ್ಧವಾಗಿ ರಾಷ್ಟ್ರೀಯ ಮಹಾಸಂಸ್ಥೆಯಾ ಲೋಕಮಾನ್ಯ ತಿಲಕ, ಗೋಪಾಲಕೃಷ್ಣ ಗೋಖಲೆ ಮುಂತಾದ ರಾಷ್ಟ್ರನಾಯಕರ ಮುಂದಾಳುತನದಲ್ಲಿ. ಅದ್ಭುತವಾದ ಆಂದೋಲನವನ್ನು ಎಬ್ಬಿಸಿತ್ತು. ಆದರೆ ಬ್ರಿಟಿಷರ ಪ್ರಬಲತಮ ಶಕ್ತಿಯೊಡನೆ ಕಾದಲು ಯೋಗ್ಯ ಮಾರ್ಗ ತೋರದೆ ತತ್ತರಿಸಿದ ಭಾರತೀಯ ಧುರೀಣರಲ್ಲಿ ಬಿಕ್ಕಟ್ಟುಂಟಾಗಿ ಕೀರ್ತಿ ಮತ್ತು ಮುಂದಗಾಮಿಗಳೆಂಬ ಎರಡು ಗುಂಪು ರಾಷ್ಟ್ರ ಮಹಾಸಂಸ್ಥೆಯಲ್ಲಿ ಆಗಿಹೋಗಿತ್ತು. ೧೮೫೭ರ ಸಿಪಾಯಿದಂಗೆಯಲ್ಲಿ ಹಿಂದೂ ಮುಸ್ಲಿಮರು ಒಟ್ಟಾಗಿ ಕಲೆತು ಆಂಗ್ಲ ಶಾಸನದೆದುರು ಖಂಡಯುವೆಬ್ಬಿಸಿದಂದಿನಿಂದ ಹಿಂದೂ ಮುಸ್ಲಿಮರಲ್ಲಿ ಏಕೈಕ ಭಾವನೆಯು ಮೂಡಿ ರಾಷ್ಟ್ರದ ಎರಡು ಕಣ್ಣುಗಳಾದ ಹಿಂದೂ ಮುಸ್ಲಿಮರು ಶಾಂತಿಯಿಂದ ವಿಶಾಲಭಾರತದಲ್ಲಿ ನೆಲಸಿದ್ದರು. ಆದರೆ ವಿಭಜಿಸಿ ಆಳುವ ನೀತಿಯ ಬ್ರಿಟಿಷರು ರಾಷ್ಟ್ರಮಹಾಸಂಸ್ಥೆಯ ಹೋರಾಟದ ತೀಷ್ಣತೆಯನ್ನು ಕುಗ್ಗಿಸಲೋಸುಗ ಹಿಂದೂ ಮುಸ್ಲಿಮರಲ್ಲಿ ಅಷ್ಟಂವರೆಗೂ ಇದ್ದ ಸೌಹಾರ್ದತೆಯನ್ನು ನಾಶಮಾಡಿ ಐಕ್ಯಭಂಗವನ್ನು ತಂದೊಡ್ಡಿ ಪರಸ್ಪರ ವೈಶಮ್ಯವನ್ನುಂಟುಮಾಡಿ ತಮ್ಮ ಶಾಸನವನ್ನು ಅವಿಚ್ಛಲವಾಗಿ ಮುಂದೆಸಾಗಿಸಿದ್ದರು. ಮೌಲಾನಾ ಆಜಾದರು ಭಾರತಕ್ಕೆ ಬಂದಾಗ ಭಾರತದ ರಾಜಕೀಯ ಪರಿಸ್ಥಿತಿ ಈ ರೀತಿಯಲ್ಲಿ ಪ್ರಕ್ಷುಬ್ಧವಾಗಿದ್ದಿತು.

ಆಜಾದರು ತಮ್ಮ ಪಿತೃದೇಶವನ್ನು ಹೊಕ್ಕಾಗ ಹಿಂದೂ ಮುಸ್ಲಿಮರಲ್ಲಿ ಪರಸ್ಪರ ಮೈತ್ರಿಯನ್ನು ಬೆಳೆಸುವಂತೆ ಸಾಧಿಸುವುದೇ ತನ್ನ ಜೀವಿತದ ಮಹಾಧ್ಯೇಯವೆಂದು ಅರಿತುಕೊಂಡರು. ಭಾರತವು ಆಂಗ್ಲರ ಅಳ್ವಿಕೆಯಿಂದ ವಿಮೋಚನೆ ಹೊಂದಿ ಸ್ವತಂತ್ರ ಪಡೆಯಲು ರಾಷ್ಟ್ರನು ಹಾರಥದ ಎರಡು ಚಕ್ರಗಳಾದ ಹಿಂದೂ ಮುಸ್ಲಿಮರು ಅತ್ಮೀಯ ಭಾವನೆಯಿಂದ ವರ್ತಿಸಿ ಬ್ರಿಟಿಷರೆದುರು ಕಾದುವುದೇ ಶ್ರೇಯೋಮಾರ್ಗವೆಂಬುದನ್ನು ವಿಶಾಲರಾಷ್ಟ್ರೀಯ ಭಾವನೆಯುಳ್ಳ ಆಜಾದರು ಅರಿತುಕೊಂಡರು. ತಮ್ಮ ೧೯ನೆಯ ವಯಸ್ಸಿನಲ್ಲೇ ತಮ್ಮ ಭಾವನೆಗಳನ್ನು ಪ್ರಚುರಪಡಿಸಲೋಸುಗ 'ವಕೀಲ್' ಎಂಬ ಉರ್ದು ಪತ್ರಿಕೆಯನ್ನು ಹೊರಡಿಸಿದರು. ಪತ್ರಿಗೋದ್ಯಮದಲ್ಲಿ ಕೈಹಚ್ಚಿದ ಆಜಾದರು ತಮ್ಮ ವಿಶಾಲ ಅಭಿವ್ಯಾಯಗಳನ್ನು ಜನತೆಯ ಮುಂದಿಟ್ಟರು. ಆದರೆ ವಕೀಲ ಪತ್ರಿಕೆಯಿಂದ ತಮ್ಮ ಉದ್ದೇಶ ಸಾಧನೆಯೊಗದೆಂಬುದನ್ನರಿತ ಆಜಾದರು 'ಅಲ್ ಹಿಲಾಲ್' ಎಂಬ ಪ್ರಭಾವಪೂರ್ಣ ಪತ್ರಿಕೆಯನ್ನು ೧೯೧೨ರಲ್ಲಿ ಪ್ರಕಟಿಸಲು ಅರಂಭಿಸಿದರು. ಅಲ್ ಹಿಲಾಲಿನ ಖ್ಯಾತಿಯು ಶೀಘ್ರದಲ್ಲೇ ದೇಶದಾದ್ಯಂತ ಹಬ್ಬಿತು. ಪೈಗಂಬರನಾದ ಮಹಮ್ಮದನ ದಿವ್ಯಸಂದೇಶವನ್ನು ಜನತೆಗೆ ಸಾರಿ ಹಿಂದೂ ಮುಸ್ಲಿಂ ಐಕ್ಯತೆಯನ್ನೂ ಬಾಂಧವ್ಯ ಭ್ರಾತೃಭಾವಗಳನ್ನೂ ಬೆಳೆಸುವುದು ಆಂಗ್ಲೇರಾಳ್ವಿಕೆಯನ್ನು ಖಂಡಿಸುವುದೂ ಅಲ್‌ಹಿಲಾಲ್ ಪತ್ರಿಕೆಯ ಮಹತ್ತರವಾದ ಧ್ಯೇಯವಾಗಿದ್ದಿತು. ಈ ಧ್ಯೇಯಸಾಧನೆಗಾಗಿ ತಮ್ಮ ತನುಮನಧನಗಳನ್ನರ್ಪಿಸಲು ಸಿದ್ಧರಾದ ಆಜಾದರ ಕೀರ್ತಿ ಕ್ಷಿಪ್ರದಲ್ಲೇ ಕಾಲ್ದೆಸೆಗಳಿಗೂ ವ್ಯಾಪಿಸಿತು.

ಅಲ್‌ಹಿಲಾಲ್ ಪತ್ರಿಕೆಯು ಆಜಾದರ ಮಹಾವ್ಯಕ್ತಿತ್ವದದ್ಯೋತಕವಾಗಿದ್ದಿತು. ಅವರಿಗೆ ಅರಬೀ, ಪಾರಸೀ ಭಾಷೆಗಳಲ್ಲಿದ್ದ ಅಸಾಧಾರಣಾಪಾಂಡಿತ್ಯವು ಈ ಪತ್ರಿಕೆಯಲ್ಲಿ ಪ್ರದರ್ಶನವಾಗುತ್ತಿತ್ತು. ಅವರು ಇಸ್ಲಾಂ ಸಂಸ್ಕೃತಿಯನ್ನು ಐರೋಪ್ಯವೈಜ್ಞಾನಿಕ ನೋಟದ ಒರೆಗಲ್ಲಿಗೆ ಹಚ್ಚಿದ ತೀಕ್ಷ್ಣವಾದ ಪರಿಶೀಲನೆಯಿಂದ ಇಸ್ಲಾಂ ಧರ್ಮಾನುಯಾಯಿಗಳಾಗಿದ್ದರಿಂದ ಅವರ ಮೂಢನಂಬಿಕೆಯ ಸಾಮ್ರಾಜ್ಯದ ಪ್ರತಿಬಿಂಬವೇ ಅಲ್‌ಹಿಲಾಲ್ ಪತ್ರಿಕೆಯಾಗಿದ್ದಿತು. ಆವರು ಇಸ್ಲಾಂ ಧರ್ಮ ಸೂತ್ರಗಳನ್ನು ತರ್ಕಬದ್ಧ ದೃಷ್ಟಿಯಿಂದ ವಿವೇಚಿಸಿ ನೋಡಿದರು. ಈಜಿಪ್ತ್, ಟರ್ಕಿ, ಸಿರಿಯ ಪಾಲೆಸ್ಟೈನ್, ಇರಾಕ್, ಇರಾನ್ ಮುಂತಾದ ಇಸ್ಲಾಂ ದೇಶಗಳಲ್ಲಿ ಮುತೀಯ ಕ್ಷೇತ್ರಪಲ್ಲಂಟಿತ ಕ್ರಾಂತಿಸುಧಾರಣೆಗಳಿಂದ ನವಚೇತನಗೊಂಡ ಆಜಾದರಲ್ಲಿ ಹೊಸತನ ಆವೇಶವು ಸಂಚಾರವಾಗಿದ್ದಿತು. ಆಜಾದರ ಲೇಖನಗಳು ಇಸ್ಲಾಂ ದೇಶಗಳೆಲ್ಲಾ ಹೆಚ್ಚು ಪ್ರಶಂಸೆಗೆ ಪಾತ್ರವಾದವು. ಈ ಕ್ರಾಂತಿಕಾರಕ ಭಾವನೆಗಳಿಂದ ಹುಟ್ಟಿದ್ದಾವ ಅಲ್‌ಹಿಲಾಲ್ ಪತ್ರಿಕೆಯು ಮುಸ್ಲಿಂ ಪ್ರಾಚೀನತಾ ಪ್ರೇಮಿಗಳ ಟೀಕೆಗೆ ಗುರಿಯಾಗಬೇಕಾಯಿತು. ಆದರೆ ತಾರ್ಕಿಕನೋಟದ ಆಜಾದರು ಇಸ್ಲಾಂ ಧರ್ಮವಾಹಿನಿ ಭಾರತ ರಾಷ್ಟ್ರೀಯತೆಗೆ ವಿರುದ್ಧವಾದುದಲ್ಲವೆಂದು ತೋರಿಸಿಕೊಟ್ಟು ಭಾರತೀಯರ ಆಶೆ ಆಕಾಂಕ್ಷೆಗಳನ್ನು ಪತ್ರಿಕೆಯು ಪೂಲಕ ಸಾರಿದರು. ಆಜಾದರ ಉರ್ದು ಭಾಷೆಯ ಲೇಖನಗಳು ಮುಸ್ಲಿಂ ತರುಣ ಮಂಡಲಿಯಲ್ಲಿ ನವೋತ್ಸಾಹವನ್ನೆ ತರದಿರಲಿಲ್ಲ. ಆಜಾದರ ರಾಷ್ಟ್ರೀಯ ನೋಟದ ವಿಕಾಸವು ನಡೆಯುತ್ತಿದ್ದ ಕಾಲದಲ್ಲೇ ಮುಸ್ಲಿಂ ಪ್ರಾಚೀನತಾ ಪ್ರೇಮಿಗಳ ಸಂಸ್ಥೆಯೊಂದು ಭಾರತ ರಾಷ್ಟ್ರೀಯತೆಗೆ ವಿರುದ್ಧವಾಗಿ ಸ್ಥಾಪಿಸಲ್ಪಟ್ಟು ಭಾರತ ರಾಷ್ಟ್ರೀಯತೆಯೊಡನೆ ಘರ್ಷಣೆಗೊಳ್ಳಲಾರಂಭಿಸಿತು. ಈ ಸಂಸ್ಥೆಯೇ ಮುಂಬೆ ಜಿನ್ನಾರವರ ನೇತೃತ್ವದಲ್ಲಿ ಬೆಳೆದು ಭಾರತದ ಅಖಂಡತೆಗೆ ಭಂಗತಂದಿತು. ಆಜಾದರ ಅಲ್‌ಹಿಲಾಲ್ ಪತ್ರಿಕೆ ಹೊಕಡುತ್ತಿದ

THE JUBILEE INSURANCE CO., Ltd.

One of the very few in the feild of Insurance that has been declaring BONUS to its policy holders from its very inception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-A., Richmand Road, Bangalore.

Our Chief Agents:—THE ORIENTAL ENTERPRISES, BANGALORE 1.

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೂದಾರರಿಗೆ ಸದಿಯೂದ ಬೋನಸ್ಸನ್ನು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮೂ ಕಂಪೆನಿಗಳಲ್ಲಿ ಜುಬಿಲಿಯೂ ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:—ಪ್ರತಿ ಸಾವಿರಕ್ಕೆ ವಷಕ್ಕೆ ರೂ. 10/- ಮತ್ತು 12/-

ಕಾರ್ಯಚತುರರಾದ ಅರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.

ದಿ ಓರಿಯೆಂಟಲ್ ಎಂಟರ್‌ಪ್ರೈಸಸ್,
41-C, ರಿಚ್‌ಮಂಡ್ ರೋಡ್, ಬೆಂಗಳೂರು 1.

ಕಾಲದಲ್ಲೆ ಪ್ರಾಣೇನತಾ ಪ್ರೇಮಿಗಳಾದ ಮುಸ್ಲಿಂ ಮುಖಂಡರು ಅಜಾದರನ್ನು ಖಂಡಿಸಿದರು; ದೂಷಿಸಿದರು; ಟೀಕಿಸಿದರು. ಆದರೆ ಇಸ್ಲಾಂ ಧರ್ಮ ತತ್ವಗಳಲ್ಲಿ ಮತೀಯ ಅಂಧವಿಶ್ವಾಸಕ್ಕೆ ಒಳಗಾದ ಪ್ರಾಣೋತ್ಸರ್ಗ ಪ್ರೇಮಗಳಿಗಿಂತಲೂ ಹೆಚ್ಚು ಪರಿಶ್ರಮವೊಂದಿದ ಅಜಾದರ ಮುಂದೆ ತನ್ನ ಪ್ರಾಣವತ್ಸಾಪ್ರೇಮವೊಷಾಧವನ್ನು ಮುಂದಿಡಲಾರದೆ ಹೋದರು.

ಪರಂತು ಅಜಾದರ ಹುಟ್ಟುವಟಿಕೆಗಳಂದ ಆಂಗ್ಲ ಸರಕಾರವು ಕೆರಳಿತು. ಅಜಾದರ ಪ್ರತಿಯನ್ನು ಸಹಿಸದ ಸರಕಾರವು ಅವರ ಪತ್ರಿಕೆ ಹೊರಡಲೂಡದೆಂಬ ಪ್ರತಿಬಂಧಕಾಜ್ಞೆಯನ್ನು ೧೯೧೫ ರಲ್ಲಿ ಜಾರಿಗೆ ತಂದಿತು. ಅಜಾದರು ನಿರಾತಂಕೆಗೊಳ್ಳದೆ 'ಅಲ್‌ಬಾಲಾಗ್' ಎಂಬ ಮತ್ತೊಂದು ಪತ್ರಿಕೆಯನ್ನು ಹೊರಡಿಸಿದರು. ಆದರೆ ಆ ಪತ್ರಿಕೆಯೂ ಬಹುಕಾಲ ಪ್ರಬಂದವಾಗಿಯಲಿಲ್ಲ. ಸರಕಾರವು ಅಜಾದರನ್ನು ಜೈಲಾಗಾಲದಿಂದ ಗಡೀಪಾರುಮಾಡಿ ಇತರ ಕೆಲವು ಪ್ರಾಂತಗಳಿಗೂ ಹೋಗದಂತೆ ನಿರೋಧಕ ಆಜ್ಞೆಯನ್ನು ಜಾರಿಗೆ ತಂದಿತು. ಇದರಿಂದಲೂ ತೃಪ್ತಿಗೊಳ್ಳದ ಸರಕಾರವು ಮೌಲಾನಾ ಅಜಾದರನ್ನು ಬಂಧಿಸಿ ಕಾಲ್ಯ ವರ್ಷ ಶಿಕ್ಷೆ ವಿಧಿಸಿ ಕಾರಾಗಾರಕ್ಕೆ ಕಳುಹಿಸಿತು.

ತೇಜೋಪೂರ್ಣ ವ್ಯಕ್ತಿಗಳನ್ನು ಎಷ್ಟರ ಮಟ್ಟಿಗೂ ಅವರು ತನ್ನ ಪ್ರಕಾಶವನ್ನು ಬೀರದಿರುವುದಿಲ್ಲ. ಬಹಿರಿಯ ಒಳಗಿದರೂ ಕೆಂಡವು ಶಾಂತಿಯ ತವಾಗಿಯೇ ಉರಿಯುತ್ತಿರುವುದು. ಬಂಧನದಲ್ಲಿದ್ದರೂ ಅಜಾದರು ತನ್ನ ಅವಿತ ಪ್ರಭೆಯನ್ನು ಬೀರದಿರಲಿಲ್ಲ. ಕಾರಾಗಾರದಲ್ಲಿ ವಾಸಿಸುತ್ತಾಗಲೇ ಮುಸ್ಲಿಮರ ಪರಮ ಪವಿತ್ರ ಗ್ರಂಥವಾದ ಕೊರಾನನ್ನು ಉರ್ದು ಭಾಷೆಗೆ ಭಾಷಾಂತರಿಸಿ ಧಾರ್ಮಿಕ ಜೀವಿಗಳಾದ ಮುಸ್ಲಿಮರಿಗೂ ಉರ್ದು ಸಾಹಿತ್ಯಕ್ಕೂ ಚಿರಸ್ಮರಣೀಯವಾದ ಸೇವೆ ಸಲ್ಲಿಸಿದರು.

ಅಜಾದರು ಬಂದ ವಿಮುಕ್ತರಾದಾಗ ಭಾರತದ ರಾಷ್ಟ್ರೀಯ ಮಹಾಸಮರವು ತೀವ್ರ ಶಕ್ತಿಯಿಂದ ಹೊಡಲ್ಪಟ್ಟಿದ್ದಿತು. ಅಹಿಂಸಾಮೂರ್ತಿ ಮಹಾತ್ಮನ ನೇತೃತ್ವದಲ್ಲಿ ನಡೆಯುತ್ತಿದ್ದ ಆಂದೋಲನಕ್ಕೆ ನವ ಚೈತನ್ಯವು ಸಂಪ್ರಾಪ್ತವಾಗಿದ್ದಿತು. ರೌಲಟ್ ಎಕ್ಟಿಗೆ ಪ್ರತಿಭಟನೆಗಾಗಿ ಪೂಜ್ಯ ಗಾಂಧಿಜಿ ಹೂಡಿದ ಪ್ರತಿಭಟನಾತ್ಮಕ ಹರತಾಳ, ಜಲಿಯನ್‌ವಾಲಾಬಾಗಿನ ದುರಂತ ಘಟನೆ ಮತ್ತು ಕಿಲಾಫತ್ ಚಳುವಳಿಗಳಲ್ಲಿ ಗಾಂಧಿಜೀ ವಹಿಸಿದ ಪಾತ್ರದಿಂದ ಗಾಂಧಿಜಿಯವರ ಮುಖಂಡತ್ವದಿಂದಲೇ ಭಾರತ ಸ್ವಾತಂತ್ರವು ಸಾಧ್ಯವೆಂದರಿತ ಅಜಾದರು ರಾಷ್ಟ್ರಿಯಸಮರದಲ್ಲಿ ಧುಮುಕಿ ಬಾಪೂಜಿಯ ಅಸಹಕಾರ ಚಳುವಳಿಯ ಎಲ್ಲಾ ಘಟ್ಟಗಳಲ್ಲೂ ಭಾಗವಹಿಸಿ ಸರಿಸುಮಾರು ಸೆರೆವಾಸವನ್ನು ಅನುಭವಿಸಿದರು. ಅಂತಿಸಿಂದಮಲೂ ಭಾರತೆಯರು ಅಜಾದರನ್ನು ರಾಷ್ಟ್ರಮಹಾ ಸಮರದ ಹಿರಿಯ ವ್ಯಕ್ತಿಯೆಂದೂ, ಭಾರತ ರಾಜಕಾರಣಿಯೆಂದೂ' ಉತ್ಕಟ ಸಲಹೆಗಾರನಾದ ಪೂಜ್ಯನಾಯಕನೆಂದೂ ಗೌರವಿಸಿ ಆದರಿಸಿದರು.

೧೯೨೦ ರ ಅಸಾಹಕಾರ್ ಚಳುವಳಿಯಲ್ಲಿ ಭಾಗವಹಿಸಿ ಒಂದು ವರುಷದ ಕಾರಾಗೃಹವನ್ನು ಅನುಭವಿಸಿದ ಅಜಾದರು ಅಂದವುಕ್ತರಾದೊಡನೆಯೇ ರಾಷ್ಟ್ರಮಹಾ ಸಂಸ್ಥೆಯು ಅವರನ್ನು ೧೯೨೩ ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷರನ್ನಾಗಿ ಆರಿಸಿತು.

೧೯೪೧ ರಲ್ಲಿ ದ್ವಿತೀಯ ಮಹಾ ಯುದ್ಧವು ತೊಡಗಿನಂದಿನಿಂದ ಭಾರತದ ರಾಜಕೀಯ ರಂಗದಲ್ಲಿ ಪ್ರಚಂಡ ಬಿರುಗಾಳಿಯೆದ್ದು ಭಾರತೆಯರ ಸ್ವತಂತ್ರಭಿಲಾಷೆಯು ದ್ವಿಗುಣಿತವಾಯಿತು. ಬ್ರಿಟಿಷ ಸರಕಾರದೆಡೆಯು ತೀಕ್ಷ್ಣವಾದ ಹೋರಾಟವನ್ನು ಪಡೆಸಬೇಕೆಂದು ಭಾರತೆಯರು ಹಪಹಪಿಸುತ್ತಿದ್ದ ಆ ಕಾಲದಲ್ಲೇ ಮೌಲಾನ ಅಜಾದರನ್ನು ರಾಷ್ಟ್ರಮಹಾ ಸಂಸ್ಥೆಯು ಇನ್ನೊಮ್ಮೆ ೧೯೪೦ ರಲ್ಲಿ ರಾಮಘರ್ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಆಯ್ಕೆಮಾಡಿತು. ಅಜಾದರು ಕ್ರಿಪ್ಸರ ಸಂಧಾನಕಾಲದಲ್ಲೂ ೧೯೪೨ ರ 'ಕ್ವಿಟ್ ಇಂಡಿಯಾ' ಚಳುವಳಿಯು ನಿರ್ಧಾರಕಾಲದಲ್ಲೂ ರಾಷ್ಟ್ರಮಹಾ ಸಂಸ್ಥೆಯು ಅಧ್ಯಕ್ಷರಾಗಿ ಅವಿತ ಜಪಾಬ್ದಾರಿಯನ್ನು ಹೊತ್ತಿದ್ದರು. ಇವೆಲ್ಲವುಗಳ ಪರಿಣಾಮವಾಗಿ ೧೯೪೬ ರಲ್ಲಿ ಭಾರತಕ್ಕೆ ಸ್ವತಂತ್ರವು ದೊರೆಯಿತು.

ಸ್ವತಂತ್ರಭಾರತದಲ್ಲಿ ನೆಹರೂರವರ ಪ್ರಧಾನತ್ವದಲ್ಲಿ ಸ್ಥಾಪಿತವಾದ ಕೇಂದ್ರ ಸರಕಾರದಲ್ಲಿ ಅಜಾದ್‌ರು ವಿದ್ಯಾಮಂತ್ರಿಯಾಗಿ ನಿಯಮಿಸಲ್ಪಟ್ಟರು! ಭಾವಿಜನಾಂಗವನ್ನು ನಿರ್ಮಿಸುವ ರಾಷ್ಟ್ರೀಯ ಶಿಕ್ಷಣ ಕ್ಷೇತ್ರದಲ್ಲಿ ಅಜಾದರಂತಾ ಅದ್ಭುತ ಪಾಂಡಿತ್ಯ, ಜ್ಞಾನ, ರಾಷ್ಟ್ರಿಯ ಭಾವನೆಗಳಿಂದ ಕೂಡಿದ ವ್ಯಕ್ತಿಗಳನ್ನು ನಿಯಮಿಸಿದುದು ಭಾರತ ಸರಕಾರದ ವಿಶಾಲ ದೋರಣೆಯನ್ನು ಸಾರುವುದು. ಅಜಾದರ ದಿವ್ಯ ಸಂದೇಶವನ್ನು ಕೇಳಿದ್ದರೆ ಇಂತು ಹಿಂದೂ ಮುಸ್ಲಿಮರಲ್ಲಿ ಉಂಟಾಗಿದ್ದ ದುರ್ದೇಶ ಕಲಹಗಳು ಉಂಟಾಗಲು ಅಸ್ಪದವಿರುತ್ತಿರಲಿಲ್ಲ; ಪೂರ್ವವಲ್ಲ ಭಾರತವು ಇಚ್ಛಾಗಡಾಗಿ ಒಡೆಯುತ್ತಿರಲೂ ಇಲ್ಲ. ಇಂದು ಕೂಡಾ ಅಜಾದರು ಮತೀಯ ಸೌಹಾರ್ದತೆಯನ್ನು ಸಾಹಾನು ಭೂತಿಯನ್ನು ಸಾರುವ ವಿಶಾಲ ರಾಜಕಾರಣಿಗಳಾಗಿ ಹಿಂದೂ ಮುಸ್ಲಿಂ ಐಕ್ಯತೆಗಾಗಿ ಸಾಧಿಸುತ್ತಲಿರುವರು. ಕಾಂಗ್ರೆಸ್ಸಿನ ಮಹಾಧ್ಯಕ್ಷ ಜವಹರರ ಕಾರ್ಯ ನಿರ್ವಾಹಕ ಸಮಿತಿಯಲ್ಲಿದ್ದು ಇಂದೂ ಕೂಡಾ ರಾಷ್ಟ್ರ ಸಂಸ್ಥೆಯು ಪುನುಃಖ ದಿಗ್ದರ್ಶಕರಾಗಿರುವರು.

೧೯೪೭ ರ ಮಹಾಚುನಾವಣೆಯಲ್ಲಿ ಲೋಕಸಭೆಗೆ ಆರಿಸಲ್ಪಟ್ಟ ಅಜಾದರು ಎರಡನೇಧಾರಿ ವಿದ್ಯಾಮಂತ್ರಿಯಾಗಿ ನಿಯಮಿಸಲ್ಪಟ್ಟರುವರು. ಅಜಾದರು ಮಂಗುದೊಪ್ಪೆ ಐರೋಪ್ಯಖಂಡಕ್ಕೂ ಮಧ್ಯ ಪ್ರಾಂತ್ಯಕ್ಕೂ ಪಯಣ ಬೆಳೆಸಿ ಭಾರತದ ಸಂದೇಶವನ್ನು ಸಾರಿದರು. ಕೊರಾನಿನ ಭವ್ಯ ಆಧರ್ಶವನ್ನು ಪಾಲಿಸುವ ಅಜಾದರ ವಿದ್ಯಾಮಂತ್ರಿತ್ವದಲ್ಲಿ ಭಾರತದ ಕೀರ್ತಿಯು ದಶದಿಕ್ಕುಗಳಿಗೂ ಹರಡಲಿ!

ಸಂಸ್ಮರಣೀಯ ಆಗಸ್ಟ್ ೮!

ಲೇ: ನಗೀನದಾಸೆ ಟಿ ಮೂಸ್ಟರ್,
(ಮಾಜಿ ಅಧ್ಯಕ್ಷ ಖ. ಪಿ ಸಿ ಮತ್ತು ಎಕ್ಸ್ ಮೇಯರ್ ಪಮೂಖಯ)

ಭಾರತದ ಅನಂತಕಾಲದ ಮತ್ತು ವೈವಿಧ್ಯಮಯ ಇತಿಹಾಸದಲ್ಲಿ ಆಗಸ್ಟ್ ೮ ಮರೆಯುವ ದಿನ; ಶತಾರಂಭದ ದಿನವೆಂದರೂ ಸರಿ! ಆ ಪವಿತ್ರ ದಿನವೆಂದು, ಮಹಾತ್ಮಾ ಗಾಂಧಿಯವರು "ಭಾರತದಿಂದ ತೊಲಗಿರಿ" ಎಂಬ ರಣಕಹಳೆಯನ್ನು ಊದಿದರು. ರಾಷ್ಟ್ರದ ಬಂಧಮುಕ್ತತೆಯ ಅಂತಿಮ ಕಾಳಗವಾದ "ಭಾರತದಿಂದ ತೊಲಗಿರಿ" ಹೋರಾಟವನ್ನು ಅವರು ಹೂಡಿಯೇ ಬಿಟ್ಟರು. ಈ ಕೂಗು ಜಗತ್ತಿನತುಂಬೆಲ್ಲ ಪ್ರತಿಧ್ವನಿಗೈದಿತ್ತು. ಮತ್ತು ಬ್ರಿಟಿಷ ಆಳರಸರ ಎದೆಗುಂಡಿಗೆಯನ್ನು ಅಲುಗಿಸಿತು.

ಸ್ವದೇಶಭಿಮಾನವೆಂಬ ರಭಸದ ಪ್ರವಾಹಕ್ಕೆ ಒಡ್ಡುಹಾಕಿ ಹರಿಗಡಿಸಿದುದನ್ನು ಸ್ವತಂತ್ರ ಭಾರತದ ಮಹಾಶಿಲ್ಪಿ ಮಹಾತ್ಮಾ ಗಾಂಧಿಜಿಯವರು ಬಿಲುವೆಯಂತೆ ಹರಿಯಬಿಚ್ಚಿದರು. ಜನತೆಯು ಯಾವ ಗೋಳಾಟ-ಕಷ್ಟಕ್ಕೂ ಯಾವ ತ್ಯಾಗಕ್ಕೂ ಅಳುಕದೆ, ಅವರನ್ನು ಹಿಂಬಾಲಿಸಿದರು. ಹಾಗೆ ಮಾಡಲೇಬೇಕಿತ್ತು. ಸ್ವಾತಂತ್ರ್ಯ ಪಡೆಯುವಂತೆ ಯಾವ ತ್ಯಾಗವೂ ಸರಿಗಟ್ಟುದೆಂದು ಜನತೆಯು ಅರಿದಿದ್ದಿತು. ಗುಲಾಮಗಿರಿಯು ಅಳಿಕೆಯಲ್ಲಿ ಅವಂಗೆ ತೃಪ್ತಿಯೂ ದರೂ ಎಂತಿರಬೇಕು? ಜಗತ್ತಿಕೆ ಉಳಿದ ಜನಾಂಗದಂತೆ ತಾವು ಸ್ವತಂತ್ರರಾಗಿರಬೇಕೆಂಬುದೇ ಜನತೆಯ ಹೆಬ್ಬಯಕೆಯೂ ಗಿದ್ದಿತು. ಸತತ ೬೦ ವರ್ಷಗಳ ಕಷ್ಟ ಕಾರ್ಪಣ್ಯ ಮತ್ತು ಹೋರಾಟಗಳ ಫಲವಾಗಿ ಸುಖದಾಯಕ ಕೊನೆಯೆಂಬಂತೆ, ಕೊನೆಗೆ ಸ್ವಾತಂತ್ರವು ನಡೆದು ಬಂದಿತು! ಶತಮಾನಗಳ ದಾಸ್ಯತ್ವ, ಗುಲಾಮಗಿರಿಯ ನಂತರ, ಭಾರತವು ಸ್ವತಂತ್ರ ರಾಷ್ಟ್ರವಾಯಿತು.

ಆದ್ದರಿಂದ, ಆಗಸ್ಟ್ ೮ ಎಂದೂ ಮರೆಯದ ದಿನ. ಅದೆಂದೆಂದಿಗೂ ಸಂಸ್ಮರಣೀಯ ದಿನ! ಬಹುಕಾಲದ ಸ್ವಾತಂತ್ರ್ಯ ಭಯಕೆಯನು ಸಾಧಿಸಲ್ಪಟ್ಟ ದಿನವಾದ ಮತ್ತು ನಮ್ಮ ಭಾರತವು ಸರ್ವಸ್ವತಂತ್ರ ರಾಷ್ಟ್ರವಾದ ಆಗಸ್ಟ್ ೧೫ಕ್ಕೆ ಆಗಸ್ಟ್ ೮ ಪೀಠಿಕೆಯಾಗಿದೆ. ಹಿಂದೀ ರಾಷ್ಟ್ರಿಯ ಕಾಂಗ್ರೆಸ್ ಗಲಭಾರಲ್ಲಿ ತಾನು ಜನ್ಮತಾಳಿದಂದಿನಿಂದಲೂ ಸಂಪೂರ್ಣ ಸ್ವಾತಂತ್ರ ಗುರಿಗೆ ಹೋರಾಡುತ್ತಲೇ ಬಂದಿತು. ಆ ಗುರಿ ಕೊನೆಗೊಮ್ಮೆ ಆಗಸ್ಟ್ ೧೫ಕ್ಕೆ ಈಡೇರಿತು. ೧೯೪೨ ರ ನಂತರ ಮಹಾತ್ಮಾಗಾಂಧಿಜಿಯವರು ಹೂಡಿದ ಹೋರಾಟದ ಅಂತಿಮ ಘಟ್ಟವೆಂದರೆ ಆಗಸ್ಟ್ ೮ ಎಂದೇ ಹೇಳಬೇಕು.

ಆ ದಿನ ರಾತ್ರಿ ಎಂದೂ ಮರೆಯದ್ದು. ಮುಂಬೈಯಲ್ಲಿ ಭವ್ಯವಾದ ಕಾಂಗ್ರೆಸ್ ಅಧಿವೇಶನ. ಕಾಂಗ್ರೆಸ್ಸ ಹೆಂಡಲೂ ರಾಷ್ಟ್ರದ ನಾನಾ ನಿಟ್ಟಿನಿಂದ ಬಂದ ಖ. ಖ. ಸಿ. ಸಿ. ಸದಸ್ಯರೂ ಕಾಂಗ್ರೆಸ್ ಕಾರ್ಯಕರ್ತರೂ ಮತ್ತು ಮುಂಬಯಿಯ ಲಕ್ಷಾಂತರ ಪ್ರೇಕ್ಷಕರಿಂದ ಕಿಕ್ಕಿರಿದು ತುಂಬಿತ್ತು. 'ಭಾರತ ಬಿಟ್ಟು ತೊಲಗಿರಿ' ಎಂಬ ಗೊತ್ತುವಳಿಯು ನೇರಲು ಸರ್ವಸಮ್ಮತ ಸಭೆಯಲ್ಲಿ ಏಕಾಗ್ರವಾಗಿದ್ದಿತು. ಎಲ್ಲೆಡೆಯೂ ಸೂಜಿ ಬಿದ್ದರೂ ಸಪ್ಪಳವಾಗುವ ವಾತ್ಸರ ಮೌನಕ್ಕೆ ನಿಶಬ್ದ. ಇಂತೀ ಗಂಭೀರವಾತಾವರಣದಲ್ಲಿ "ಭಾರತದಿಂದ ತೊಲಗಿರಿ" ಎಂಬ ಐತಿಹಾಸಿಕ ಗೊತ್ತುವಳಿಯು ಸ್ವೀಕೃತವಾಯಿತು. ಇದುವೇ ಆ ಗೊತ್ತುವಳಿಯು ಸ್ವೀಕೃತವಾಗಲೇ ಬೇಕಾಯಿತು. ಕಾಂಗ್ರೆಸ್ ಕಾರ್ಯ ಸಮಿತಿಯ ಸದಸ್ಯರಲ್ಲದೆ ಹಲವಾರು ಜನರು ಕೈಕಿಗಿಸಲು ಹಿಂದೆಗೆಯುವಷ್ಟರ ಮಟ್ಟಿಗೆ, ಗೊತ್ತು ವಳಿಯು ಉಗ್ರವಾದುದಾಗಿತ್ತು. ಅನೇಕ ಚರ್ಚೆಗಳ ನಂತರ ಗೊತ್ತುವಳಿಯು ಸ್ವೀಕೃತವಾಯಿತು. ಆ ಗೊತ್ತುವಳಿಯ ಫಲವೇ, ಆ ಗೊತ್ತುವಳಿಯು ಮಹತ್ವ ಸೂಚಿಸುತ್ತದೆ. ಬೆಳಕು ಹರಿಯುವ ಮುನ್ನ ಬೆಳಗಿನ ಪೂಜೆ ಮತ್ತು ಕಾರ್ಯಸಮಿತಿ ಸದಸ್ಯರೆಲ್ಲರೂ ಕಳ್ಳಿಗೊಳಗೊಂಡ ಧುರೀಣರೆಲ್ಲರ ಬಂಧನವಾಯಿತು. ೧೯೪೨ರ ಆಗಸ್ಟ್ ೯ರ ಬೆಳಿಗ್ಗೆ "ವಿಜಯ ರಥ"ದಲ್ಲಿ ಅವರನ್ನೆಲ್ಲಾ ಅಪೇಕ್ಷಿತ ಸ್ಥಳಕ್ಕೆ ಒಯ್ಯಲಾಯಿತ್ತು. ಈ ಹೋರಾಟದ ಫಲವು ಇಷ್ಟೊಂದು ತೀವ್ರದಲ್ಲಿ ಲಭಿಸುತ್ತದೆಂದೂ, ನವ್ಯಸ್ವಾತಂತ್ರ್ಯದ ಬ್ರಿಟೀಷರು ತಮ್ಮಷ್ಟಕ್ಕೆ ತಾವೇ ಭಾರತದಿಂದ ತೊಲಗುವರೆಂದೂ ಯಾರಿಗೂ ನಿರೀಕ್ಷಿಸಲಾಗದ ಸ್ಥಳದಲ್ಲಿ ರಾಷ್ಟ್ರೀಯ ಧ್ವಜವು ಹಾರುವುದೆಂದೂ ಯಾರೂ ಕನಸಿನಲ್ಲಿಯೂ ಎಣಿಸಿರಲಿಲ್ಲ.

ಮಾರುದಿನವೇ ಮುಂಬಯಿ ಮತ್ತು ಇತರ ಕಡೆಗಳಲ್ಲಿ ನಡೆದ ಘಟನೆ ವಿದೇಶ ಸರಕಾರ ಜನತೆಯ ಮೇಲೆ ಎಸಗಿದ ದೌರ್ಜನ್ಯಕೆಯ ಕ್ರಮಗಳೇ "ಭಾರತದಿಂದ ತೊಲಗಿರಿ" ಎಂಬ ಗೊತ್ತುವಳಿಯು ಸ್ವರೂಪದಲ್ಲಿ ಈಡೇರಲು ಕಾರಣಗಳಾದುವು. ಒಮ್ಮೊಮ್ಮೆ ಜೈಲಿನಲ್ಲಿರುವವರು ಕೂಡ ಬ್ರಿಟೀಷರು ಭಾರತವನ್ನು ಬಿಟ್ಟು ತೊಲಗಲು ೨೫ ವರ್ಷಗಳ ಇನ್ನೂ ಹೆಚ್ಚಿನ ಅವಧಿ ಬೇಕಾದಿತೆಂದೂ ತಾವು ಜೈಲಿನಲ್ಲಿಯೇ ಕೊಳೆಯ ಬೇಕಾದಿತೆಂದೂ ಅಥವಾ ಅಲ್ಲಿಯೇ ಸಾಯಬೇಕಾದಿತೆಂದೂ ಭಾವಿಸಿರಬೇಕು. ಬಾಪೂಜಿಯು ಐತಿಹಾಸಿಕ

Edited printed and published by P. I. Belliapa at 'Kodagu' Press, Mercara, for Kodagu Ltd.

ಅನ್ನಸತ್ಯಗ್ರಹ, ಕಸ್ತೂರಿಬಾ ಮತ್ತು ಮಹಾದೇವಬಾಯಿಯವರ ಮರಣಗಳು ಮತ್ತಷ್ಟು ನಿರಾಶೆಯನ್ನು ಹುಟ್ಟಿಸಿತು. ಮತ್ತು ನಿರಾಶವಾದವು ಇನ್ನೂ ಹೆಚ್ಚಿತು. ಅವರ ದೈವಾನುಗ್ರಹದ ರೀತಿಯೇ ಹಿಗೂಡವಾದುದು! ಸುಮಾರು ಐದು ವರ್ಷ ಅವಧಿಯಲ್ಲಿ "ಭಾರತದಿಂದ ತೊಲಗಿ" ಎಂಬ ಕಾರ್ಯಕ್ರಮವು ೧೯೪೨ರ ಆಗಸ್ಟ್ ೮ರಂದು ಪೂರ್ತಿಗೊಂಡಿತು. ಸ್ವಾತಂತ್ರ್ಯ ಸೂರ್ಯ ಗಾಂಧೀಜಿಯ ದಂಡಿಯಾತ್ರೆಯಿಂದ ಉದಯಿಸಿತಾಗಿ ಆಗಸ್ಟ್ ೯ರಿಂದ ಮುನ್ನಡೆದು ದಿ. ೧೫ರಂದು ಉಚ್ಚಸ್ಥಾನಕ್ಕೇರಿದ:

ಭಾರತ ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಇತರ ರಾಷ್ಟ್ರಗಳ ಇತಿಹಾಸದಲ್ಲಿ "ಭಾರತದಿಂದ ತೊಲಗಿರಿ" ಗೊತ್ತುವಳಿಯು ನಿರಂತರವಾಗಿ ಉಳಿದು ಸ್ವಾತಂತ್ರ್ಯ ಮಾರ್ಗವನ್ನು ತೋರಿಸುವುದು ಮತ್ತು ಉಳಿದ ರಾಷ್ಟ್ರಗಳಲ್ಲಿ ನಡೆಯುತ್ತಿರುವ ವಿಧಾನವನ್ನು ತೋರಿಸುತ್ತದೆಂಬುದನ್ನು ನಾವುಗಮನಿಸುವಾಗ, ಕೊನೆಗೆ ಅನಿವಾರ್ಯವಾಗಿ ಭಾರತದಿಂದ ತೊಲಗಿರಿ' ಪೂಜೆಯು ಈ ಭಾರತದಿಂದ ತೊಲಗಿರಿ' ಹೋರಾಟವನ್ನು ಮತ್ತು 'ನೂಡು ಇಲ್ಲವೆ ಸಾವಿ' ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಯಿತೆಂಬುದು ಗಮನಾರ್ಹವಾಗಿದೆ

ಇಪ್ಪತ್ತನೂರು ವರುಷಗಳ ಹಿಂದೆಯೇ ಬ್ರಿಟೀಷರಿಗೆ ಸಹಾಯವೆಂದು ಭಾರತದಿಂದ ಸೈನ್ಯಭರತಿಯು ಕಾರ್ಯದಲ್ಲಿ ಭಾಗಿ ಸಹಾಯ ಸಲ್ಲಿಸಿದರು. ಅವರಿಗೆ ಅಮಿತವಾದ ಮೂಲ ಮರ್ಯಾದೆಯನ್ನೂ ಕೊಡುತ್ತಲೇ ಬಂದರು. ಅವರ ವಿರುದ್ಧ ಎಳ್ಳಷ್ಟೂ ಕಿಡುಕು ನೋವು ಎಸಗಲಿಲ್ಲ. ಇಷ್ಟೆಲ್ಲವೂ ವ್ಯರ್ಥವಾದ ಮೇಲೆ ಭಾಪೂಜಿಯಂತಾ ಉದಾತ್ತ ಹೃದಯದಿಂದ ಕೊನೆಗೆ 'ಭಾರತದಿಂದ ತೊಲಗಿರಿ' ಗೊತ್ತುವಳಿಯು ಮೂಡಿ ಬಂದಿತು. ಬ್ರಿಟೀಷರಲ್ಲಿಯ ನ್ಯಾಯ ಸಂಬಂಧಿಯನ್ನು ಅವರು ನಂಬಲಾರದಷ್ಟಂತರವೇ ಈ ಗೊತ್ತುವಳಿ ಬಂದಿತು.

ಈ ಸಂಧರ್ಭದಲ್ಲಿ ನೇತಾಜಿ ಸುಭಾಷ್‌ಚಂದ್ರ ಬೋಸರು ಎಸಗಿದ ಕಾರ್ಯವನ್ನು ಸ್ಮರಿಸದಿರಲಾರೆ. ಅವರು ಭಾರತವನ್ನು ಬಿಟ್ಟು 'ಆಜಾದ್‌ಹಿಂದ್' ದಳವನ್ನು ಸಂಘಟಿಸಿ ಬ್ರಿಟೀಷರನ್ನು ತೊಲಗಿಸುವಲ್ಲಿ ತಮ್ಮ ಪಾತ್ರವನ್ನು ಅಡಿದರು. ಆಜಾದ್‌ಹಿಂದ್ ದಳದಕಾರ್ಯ ಕೆಂಪುಕೋಟೆಯು ಐತಿಹಾಸಿಕ ವಿಚಾರಣೆಗಳು ಸ್ವರಾಜ್ಯವು ಅವಶ್ಯವಾದುದೆಂದು ಖಚಿತಪಡಿಸಿದವು. ಬ್ರಿಟೀಷರು ತಮ್ಮ ಅಳ್ವಿಕೆಯಲ್ಲಿ ಹೆಚ್ಚಾಗಿ ಸೈನ್ಯವನ್ನೆ ಅವಲಂಬಿಸಿದ್ದರು. ಈ ಸೈನಿಕರಲ್ಲಿಯೇ ಸ್ವನಾಡಿನ ಬಗ್ಗೆ ಇರುವ ಅಂತಿಮ ಕಳಕಳಿಯು ಗೊತ್ತಾದುದರಿಂದ, ಬ್ರಿಟೀಷರು ಅರಿವಿನ ಮೇಲೆ ಬಂದರು. ಬ್ರಿಟೀಷರು ಜಾಣರಾಗಿ, ಹಿಂದಿಯರೊಡನೆ ಯಾವತ್ತಿಗೂ ಸ್ನೇಹಭಾವ ಸಂಪಾದಿಸಲು ಅವರ ರಾಜ್ಯವನ್ನು ಅವರಿಗೆ ಬಿಟ್ಟುಕೊಟ್ಟರು.

ಹಿಂದಿನಿಂದ ಪ್ರಸ್ತಾಪಕವಾಗಿ ಆ ದಿವಸವನ್ನು ಆಚರಿಸಲಾಗದಿದ್ದರೂ ಆಗಸ್ಟ್ ೧೫ ಸ್ವಾತಂತ್ರ್ಯ ಹೋರಾಟವು ಭಾರತದ ಇತಿಹಾಸದಲ್ಲಿ ಯಾವತ್ತಿಗೂ ಉಳಿಯುವುದು. ೧೯೪೨ರ ಆಗಸ್ಟ್ ೮, ೧೯೫೨ರ ಆಗಸ್ಟ್ ೧೫ಕ್ಕೆ ಹುಟ್ಟಿಹಾಕಿತು.

ಪಯಸ್ವಿನಿ.

ಓದುಗರ ಓಲೆಗಳು

ಹಿಂದುಳಿದ ಪಂಗಡದ ಸ್ಕಾಲರ್ ಶಿಪ್.

ಅಯ್ಯಾ,

೧೧-೭-೫೭ ರ ಪತ್ರಿಕೆಯಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳು ಪ್ರಕಟಿಸಿದ ಇಸ್ತಿಹಾರನ್ನು ನೋಡಿ ಇಂಡಿಯಾ ಸರಕಾರದಿಂದ ಶೆಡ್ಯೂಲ್ ಜಾತಿ ಮತ್ತು ಹಿಂದುಳಿದವರಿಗೆ ಸ್ಕಾಲರ್‌ಶಿಪ್ ವಿಷಯವಾಗಿ ಸ್ಕೂಲ್ ಫೈನಲ್ ಪಾಸಾದವರಿಗೆ ಕೊಡಲಾಗುವದು ಎಂದು ಬರೆದಿರುತ್ತಾರೆ. ಇದು ನೋಡಿದರೆ ದಲಿತವರ್ಗದವರ ಮತ್ತು ಹಿಂದುಳಿದ ಪಾರ್ಟಿಗಳ ಹೆಸರಿನ ಸ್ಕಾಲರ್‌ಶಿಪ್ ಅಲ್ಲದೆ ಅದನ್ನು ಪಡೆಯಲು ಅರ್ಹರಾದ ಹುಡುಗರು ದೊರಕುವದು ವಿರಳವಾಗಿದೆ. ಯಾಕೆಂದರೆ ಹಿಂದುಳಿದ ಪಾರ್ಟಿಗಳ ಹುಡುಗರು ಎಸ್. ಎಸ್. ಎಲ್. ಸಿ ಪಾಸಾದವರು ಮುಂದೆ ಕಾಲೇಜಿಗೆ ಹೋಗುವ ಹುಡುಗರು ಸಿಕ್ಕುವದೂ ಇಲ್ಲ, ಆ ಹಣ ಅವರಿಗೆ ಕೊಡುವದೂ ಇಲ್ಲ, ಎಂಬುದಾಗಿ ಯೋಚಿಸಿದರೆ ತಪ್ಪಾಗಲಾರದು. ಈ ಎರಡು ವರ್ಗದವರನ್ನು ವಿದ್ಯೆ, ಚಾಕರಿ, ಬಟ್ಟೆ ಪುಸ್ತಕ ವಗೈರೆ ಕೊಟ್ಟು ಅವರನ್ನು ಮುಂದುವರಿಯಲು ಸಹಾಯ ಮಾಡುವ ಯೋಜನೆಯಲ್ಲಿ ಇದ್ದರೆ ಈ ಯೋಜನೆಯನ್ನು ಈ ಕೆಳಗೆ ಕಂಡ ರೀತಿ ಬದಲಾಯಿಸಿ ಕೊಡಗಿನ ಮಟ್ಟಿಗೆ ಸಹಾಯವಾಗಬೇಕಾಗಿ ಸರಕಾರವನ್ನು ಬೇಡಿಕೊಳ್ಳುತ್ತೇನೆ. ಸ್ಕೂಲ್‌ಫೈನಲ್' ಎಂಬುದರ ಬದಲು ಹೈಯರ್ ಎಲಿಮೆಂಟರಿ' ಎಂದು ತಿದ್ದುಪಡಿಮಾಡಿ ಪ್ರೌಢ ವಿದ್ಯಾಭ್ಯಾಸ ಮಾಡುವ ಯುವಕ ಯುವತಿಯರಿಗೆ ಸ್ಕಾಲರ್‌ಶಿಪ್ ಅಥ ಫ್ರಿ ಶಿಪ್ ಬಟ್ಟೆಬರೆ ಮೊದಲಾದುವುಗಳನ್ನು ಕೊಟ್ಟು ಅವರನ್ನು ಪ್ರೋತ್ಸಾಹಿಸಿ ಮುಂದಳ ಅಭಿವೃದ್ಧಿಗಾಗಿ ಮೇಹನತ್ತು ವಹಿಸಿ ಅವರನ್ನು ಸತ್ಪ್ರಜೆಗಳಾಗಿ ಮೂರ್ಪಡಿಸಲು ಸಹಾಯ ಮಾಡಬೇಕಾಗಿ ಅಶಿಸುತ್ತೇನೆ. ಈ ರೀತಿ ತಿದಪಡಿಮಾಡದೆ ಈಗಿನ ಯೋಜನೆಯನ್ನು ಮುಂದುವರಿಸಿದರೆ, ದಲಿತವರ್ಗದವರಿಗೆ ಕೊಡುವ ಸ್ಕಾಲರ್‌ಶಿಪ್ ಮುಂದುವರಿದವರ ಪಾಲಿಗೆ ಹೋಗುತ್ತೆ. ಆದುದರಿಂದ ಅಧಿಕಾರಿಗಳು ಈ ವಿಷಯ ಹೆಚ್ಚಿನ ಆಲೋಚನೆ ವಹಿಸಿ ಪರ್ಯಾಲೋಚನೆಯಿಂದ, ಈ ಮೇಲ್ಕಂಡ ಸೂಚನೆಗೆ ಸರಿಯೂಗಿ ಕೊಡುಗೈನೀಡುವರಾಗಿಯೂ ಸ್ಕಾಲರ್‌ಶಿಪ್ ಕವಿಟಗಳಿಗೆ ಈ ಸೂಚನೆಯನ್ನು ಕೊಡಬೇಕಾಗಿಯೂ ವಿನಂತಿಸ್ತೇನೆ.

'ಹಿಂದುಳಿದವ'.

ಇದು ಯಾವ ನ್ಯಾಯ?

ಕೊಡಗಿನಲ್ಲಿ ರೈತರು ತಮ್ಮ ಭೂವಿಗಳಿಗೆ ನೀರಿನ ಸರಬರಾಯಿಗಾಗಿ ಗ್ರಾಮಗಳಲ್ಲಿರತಕ್ಕ ಕೆರೆ, ಕಟ್ಟೆ, ಕಾಲುವೆ ಮೊದಲಾದುವನ್ನು ತಾವೇ ಪರಸ್ಪರ ಸೇರಿದುರಸ್ತು ಮಾಡಿದಾದರೆ ಅಂತಹ ಕೆಲಸಗಳಿಗೆ ಕೊಡಗು ಸರಕಾರವು ಇನಾಮು ಕೊಡುವುದಾಗಿ ತಾ ೭-೩-೫೮ರ ಕೊಡಗು ಪತ್ರಿಕೆಯಲ್ಲಿ ಪ್ರಕಟಿಸಿದ್ದು ಸರಿಯಷ್ಟೆ. ಆದರೆ ಇಂತಹ ಕೆರೆ, ಕಟ್ಟೆ, ಕಾಲುವೆಗಳನ್ನು ಎಷ್ಟೋ ಗ್ರಾಮಗಳ ರೈತರು ಪರಸ್ಪರ ಸಹಕರಿಸಿ ರಿಪೇರಿಮಾಡಿ ನಾಲ್ಕು ತಿಂಗಳ ಕಾಲವಾಯಿತು. ಆದರೂ ಮೇಲೆ ತಿಳಿಸಿದ ಇನಾಮು ಹಣವು ಏನಾಯಿತೆಂಬುದು ಗೊತ್ತಾಗುವುದಿಲ್ಲ. ಆದರೆ ರೈತರು ಇಂತಹ ಕೆಲಸಗಳನ್ನು ಹಣದ ಆಶೆಗೆಂದು ಮಾಡಿರುವದಲ್ಲ. ಪತ್ರಿಕೆಗಳಲ್ಲಿ ಪ್ರಕಟಿಸಿದ ರೀತಿ ಕೇಳುವುದಾಗಿದೆ. ಸಂಬಂದ ಪಟ್ಟ ಅಧಿಕಾರಿಗಳು ಸರಿಯಾದ ಉತ್ತರ ಕೊಡುವರೇ?

'ಯಂ. ಕೆ. ಕ'

ಆಹಾರ-ನಿರುದ್ಯೋಗ ಮತ್ತು ಭಿಕ್ಷಾವೃತ್ತಿ

ಇಂದು ಹಿಂದೂದೇಶದ ಉದ್ದಗಲಕ್ಕೂ ನೋಡಿದರೆ ಈ ಸಮಸ್ಯೆಗಳು ಕಂಡುಬರುತ್ತಿವೆ. ಇವನ್ನು ನಿವಾರಿಸುವ ಬಗ್ಗೆ ಹಲವಾರು ಪ್ರಾಂತ್ಯದ ಅಧಿಕಾರಿಗಳು ಹಲವು ರೀತಿಯಲ್ಲಿ ಪ್ರಯತ್ನಿಸುತ್ತಿರುವರು. ಫಲ್ಗು ಕೊಡಗಿನಲ್ಲಿಯೂ ಕೂಡ ಈ ಸಮಸ್ಯೆಗಳ ನಿವಾರಣೋಪಾಯಕ್ಕಾಗಿ ಸಂಬಂಧಪಟ್ಟ ಫಲ್ಗು ಪ್ರಜಾ ಸರಕಾರದ ಮಂತ್ರಿಗಳು ಶ್ರದ್ಧೆ ವಹಿಸುವರೆಂದು ಆಶಿಸಲಾಗಿದೆ.

ಆಹಾರದ ವಿಷಯ ಕೊಡಗು ಉಳಿದವರಿ ಪ್ರಾಂತ್ಯವಾದರೂ ಕೂಡ ಆಹಾರ ಧಾನ್ಯಗಳ ಬೆಲೆಯು ಮಿತಿಮೀರಿ ಏರದಂತೆ ಮುಂಜಾಗ್ರತೆ ವಹಿಸಿಕೊಳ್ಳುವುದು ಉತ್ತಮ. ನಿರುದ್ಯೋಗದ ಮಟ್ಟಿಗೆ ಇತರ ದೇಶಗಳಲ್ಲಿ ಇರುವಂತೆಯೇ ಕುಂದು ಕೊರತೆಗಳು ಇಲ್ಲಿಯೂ ಇವೆ. ಇವುಗಳ ಅಂಖ್ಯೆ ಸಂಖ್ಯೆಗಳನ್ನು ಎಂಪ್ಲಾಯಿಮೆಂಟ್ ಆಫೀಸಿನಲ್ಲಿ ತಿಳಿಯಬಹುದು. ಅಲ್ಲದೆ ಅವಿದ್ಯಾವಂತರಾಗಿ ಕೆಲಸವಿಲ್ಲದೆ ಅಲೆದಾಡುವ ಅದೆಷ್ಟೋ ಮಂದಿ ಕೂಡಾ ಬೇರೆ ಇದ್ದಾರೆ. ಇವರಲ್ಲಿ ಮಣಕ್ಕಾಲಂಶ ಜನರು ಪೂರ್ತಿಯಾಗಿ ಏನೂ ಇಲ್ಲದೆ ಉದ್ಯೋಗದ ಬಗ್ಗೆ ತಮ್ಮ ಹೆಸರನ್ನು ರಿಜಿಸ್ಟ್ರಿ ಮಾಡಿಸಿ ಈ ದಿವಸ ಹುಕುಂ ಬರಬಹುದು ಯಾ ನಾಳೆ ಬರಬಹುದು ಎಂದು ಬಾಯಿಬಿಟ್ಟು ಕೂತಿರುವವರು. ಆ ದಂದರಿಂದ ಈ ವಿಚಾರದಲ್ಲಿ ಹೆಚ್ಚಿನ ಶ್ರಮ ವಹಿಸಿ ಆದಷ್ಟು ಮಟ್ಟಿಗೆ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಬೇಕು.

ಇದಕ್ಕಾಗಿ ಸರಕಾರದವರು ಹೆಚ್ಚಿನ ಕಾರ್ಖಾನೆಗಳನ್ನೂ, ಇತರ ಉದ್ಯೋಗ ಕೇಂದ್ರಗಳನ್ನೂ ನಿರ್ಮಿಸಿ ಈ ಸಮಸ್ಯೆಯನ್ನು ಪರಿಹರಿಸಬಹುದು. ಭಿಕ್ಷಾವೃತ್ತಿಯಲ್ಲಿ ಕೊಡಗಿನವರಲ್ಲಿ ಹೆಚ್ಚಿಗೆ ಇಲ್ಲದೆ ಇತರ ದೇಶಗಳಿಂದ ಇಲ್ಲಿಗೆ ಬಂದು ಜೀವಿಸುವವರೇ ಅಧಿಕ ಅಂಗಹೀನರು ಭಿಕ್ಷೆ ಬೇಡುವುದು ಒಂದು ವಿಧವಾದರೆ, ಮಂಗ ಎತ್ತುಗಳನ್ನು ಕಾಣಿಸಿ ಭಿಕ್ಷೆ ಬೇಡುವುದು ಇನ್ನೊಂದು ವಿಧ ಕವಿಗೆ ಕರ್ಕಶವಾಗುವ ರೀತಿಯಲ್ಲಿ ಬೊಬ್ಬೆ ಹಾಕುತ್ತ ಹಾಡುತ್ತಾ ಹೊಟ್ಟೆಯ ಮೇಲೆ ಹೊಡಕೊಂಡು ತಾಳ ಹೊಡಕೊಂಡು ಯಾ ತಂಬೂರಿ ಬಾರಿಸಿಕೊಂಡು ಬರುವವರ ಗುಂಪು ಇನ್ನೊಂದೆಡೆ. ದೇವರ ಹೆಸರಿನಲ್ಲಿ ಏನೇನನ್ನೋ ಹೊತ್ತುಕೊಂಡು ಕೊರಡೆಯಿಂದೆ ಹೊಡಕೊಂಡು ಹಲವಾರು ಬಣ್ಣಗಳನ್ನು ಬಡಿದುಕೊಂಡು ಭಿಕ್ಷೆ ಎತ್ತುವವರು ಬೇರೊಂದು ಕಡೆ. ಹೀಗಾಗಿ ಭಿಕ್ಷುಕರ ಸಂಖ್ಯೆ ಹೆಚ್ಚುತ್ತಾ ಇದೆ. ಇದಕ್ಕಾಗಿ ಪರದೇಶಗಳಿಂದ ಬರುವವರನ್ನು ತಡೆದರೆ ಮುಕ್ಕಾಲು ಪಾಲು ಕಡಿಮೆ ಅಪಾಯವಾಯಿತು. ಇನ್ನುಳಿದವರಿಗೆ ಯೋಗ್ಯ ಶಾಲೆಗಳನ್ನು ತೆರೆದು ಗಂಜಿ ಕೊಡುವ ವ್ಯವಸ್ಥೆ ಮಾಡಿ ಕೈಗಾರಿಕೆಯ ಕೆಲಸಗಳನ್ನು ಅಂದರೆ ಹೆಣೆಯುವುದು, ಹೂಲುಪಡಿ ಮುಂತಾದ ಕೆಲಸಗಳನ್ನು ಕಲಿಸುವುದರಿಂದ ಈ ಸಮಸ್ಯೆಯನ್ನೆ ಪರಿಹರಿಸಬಹುದು. ದೀನ ಜನೋದ್ಧಾರ ಸೇವೆಯೇ ಜನಾರ್ಧನನ ಸೇವೆಯೆಂಬಿರುವದರಿಂದ ಈಗಿನ ಮಂತ್ರಿಗಳು ಈ ಕೆಲಸವನ್ನು ಪೂರೈಸಿ ಸರ್ವರ ಪ್ರೀತಿಗೆ ಪಾತ್ರರಾಗಿ, ಇವರ ದೇಶದ ಏಳಿಗೆಯ ಕೆಲಸವನ್ನು ಎಲ್ಲರೂ ಮೆಚ್ಚುವಂತಾಗಲಿ.

ಗೋಪಾಲಕೃಷ್ಣ.

ಯಾವ ನ್ಯಾಯ?

ಯುದ್ಧವು ಏನೆಂಬ ಸಾಮಾನ್ಯನ ಬೆಲೆ ತಗ್ಗಿಹೋಯಿತು. ದೇಶವು ಸ್ವತಂತ್ರವಾಗಿದೆ. ದೇಶದಲ್ಲಿ ಶಾಂತಿ ನೆಲೆಸಿದೆ. ಆಹಾರದ ಬೇಲಿದ್ದ ಮುಖ್ಯವಾಗಿ ಅಕ್ಕಿಯು ಮೇಲಿಷ್ಟ ಪಡಿತರ ಪದ್ಧತಿಯು ಕೂಸನ್ನೂ ಹೋಗಿದೆ. ಆದರೂ ರೈತನು ಬೆಳೆವುದೇ ಕೆಲವು ಬಿಗಿತಗಳಿಂದ ಇನ್ನೂ ಬಿಗಿಯಲ್ಪಟ್ಟಿದ್ದಲ್ಲದೆ ಸಡಿಲವಾಗಿರುವುದು ಕಾಣುವುದಿಲ್ಲ.

ಅಪ್ಪಗಳಲ್ಲಿ ಒಂದು ಎಂದರೆ, ಹೊಟೇಲುಗಳಲ್ಲಿ ಸಕ್ಕರೆ, ಹಾಲು ಧಾರಾಳ ಕಡಿಮೆ ಕ್ರಯಕ್ಕೆ ಸಿಕ್ಕುತ್ತಿದೆಯಾದರೂ ಅವರು ಮಾರುತ್ತಿರುವ ಕ್ರಯವು ಕಡಿಮೆಯಾಗಿಲ್ಲ. ಕಾಫಿ, ಟೀಗಳಿಗೆ ಇನ್ನೂ ಒಂದೂವರೆ ಎರಡಾಣೆಯಷ್ಟಿದೆಯೇ ಉಳಿದಿದೆ. ಇದನ್ನು ತಗ್ಗಿಸಲು ಸಾಧ್ಯವಿಲ್ಲವೆ? ಸರಕಾರವು ಗಮನಿಸಿ ರೇಶನ್ ಈ ಹಿಡಿತದಿಂದ ಬಿಡಿಸಲು ಸಾಧ್ಯವಿಲ್ಲವೇ?

ತಿಮ್ಮಯ್ಯ.

ಅಯ್ಯಾ ಸಂಪಾದಕರೆ,

ನಾನು ಎಸೆಂಬ್ಲಿಯಲ್ಲಿ ಮಾಡಿರುವ ಭಾಷಣದ ಸಾರಾಂಶವನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದಾಗ್ಯೆ, ನಾನು 'ತೋಟಗಳ ಕೇಂಟೀನ್ ವ್ಯವಸ್ಥೆ ಹೆಸ್ಸಾಗಿ ನಡಿಯುತ್ತಿಲ್ಲ'ವೆಂದು ಸೂಚಿಸುವಾಗಿ ಪ್ರಕಟಿಸಲಾಗಿದೆ. ಆದರೆ ನಾನಿಲ್ಲ ಹೇಳಿಸಿದರ ಅರ್ಥವು ಈ ರೀತಿ ಇದೆ.

'ತೋಟದ ಕೆಲಸಗಾರರ ಬಗ್ಗೆ ಕೂಡುವ ಖಾನೂನುಗಳನ್ನೆ' ಇಲ್ಲಿನ ಸ್ಥಿತಿಗತಿಗಳ ಅನುಭವವಿಲ್ಲದ ಡೆಲ್ಲಿಯಲ್ಲಿರುವವರು ಮಾಡುವುದರಿಂದ ಹಲವು ಖಾನೂನುಗಳು ಈ ಊರಿಗೆ ಉಪಕಾರಪಾಗುವ ಬದಲು ಅನಾವಶ್ಯಕ ಮತ್ತು ತೊಂದರೆ ಕೊಡುವಂಥ ಖಾನೂನುಗಳಾಗುತ್ತವೆ. ಉಪಾಹರಣೆ ಹೇಳುವುದಾದರೆ ತೋಟಗಳಲ್ಲಿ ಕ್ಯಾಂಟೀನ್‌ಗಳನ್ನು ಮಾಡಬೇಕೆಂಬ ಖಾನೂನು ಮಾಡುವದರಲ್ಲಿದ್ದಾರೆ- ಕಾರ್ಖಾನೆಗಳಲ್ಲಿ ಇದು ಉಪಯೋಗವಾದೀತು. ಆದರೆ ಕಾಫಿತೋಟಗಳಲ್ಲಿ ಕ್ಯಾಂಟೀನ್‌ಗಳಿಂದ ಪ್ರಯೋಜನವಾಗಲಾರದು. ಹೊಸ ಖಾನೂನುಗಳನ್ನು ಮಾಡುವಾಗ ಸ್ಥಳೀಯ ಸರಕಾರದವರು ಈ ಊರಿನ ಸ್ಥಿತಿಗತಿಗಳನ್ನು ಅನುಸರಿಸಿಯೇ ಕ್ಯಾಂಟೀನ್‌ಗಳಿಗೆ ಧಕ್ಕೆ ಬರದ ರೀತಿಯೇ ಖಾನೂನು ಮಾಡಬೇಕು!

ಜೆ ಎಂ. ವೆಂಜುನಾಥಯ್ಯ.

ಕೊಡಗು

ತಾ. ೧೫-೪-೧೯೪೭ ನೇ ಶುಕ್ರವಾರ

ಹಿಂದುಳಿದವರು.

ಹಿಂದುಳಿದವರ ಬಂಧುವಾದ ಮಹಾತ್ಮ ಗಾಂಧಿಯವರ ತ್ಯಾಗ, ಸಾಹಸಗಳಿಂದ ಶತ ಮಾನಗಳಿಂದ ಹಿಂದೆ ಬಿದ್ದಿದ್ದ ಜಾತಿಗಳ ಮತ್ತು ಹಿಂಗಜದವರ ಸ್ಥಿತಿಗತಿಗಳಿಗೆ ಮೇ ಲ್ತರಗತಿಯವರು ಹೆಚ್ಚಿನ ಗಮನ ಕೊಡು ವಂತಾಯಿತು. ಸ್ವಾತಂತ್ರ್ಯ ಹೋರಾಟ ದ ಕಾಲದಲ್ಲಿ ಈ ಜನರಿಂಗೆ ಕಾಂಗ್ರೆಸ್ ಸಂ ಸ್ಥೆಯು ಭರವಸೆಯನ್ನಿತ್ತಿದ್ದಂತೆ ಕಾಂಗ್ರೆ ಸ್ಸಿಗರು ಅಧಿಕಾರಕ್ಕೆ ಬಂದ ಮೇಲೆ, ಈ ಪ್ರ ಶ್ನೆಗೆ ಪ್ರಾಮುಖ್ಯತೆ ದೊರೆಯಿತು. ಹೊ ಸ ರಾಜ್ಯಶಾಸನೆಯ ೧೫ ನೇ ಸೆಕ್ಷನ್ ಮೇ ರೆ ಈ ಪಂಗಡದವರಿಗೆ ಎಲ್ಲಾ ಸಾರ್ವಜನಿ ಕ ಸ್ಥಳಗಳಲ್ಲಿ ಪ್ರವೇಶ ಕೊಡುವಂತೆಯೂ, ೧೭ನೇ ಸೆಕ್ಷನ್ ಮೇರೆ ಅಸ್ಪೃಶ್ಯತೆಯು ಯಾವ ವಿಧದಲ್ಲಿಯೂ ಇರಕೂಡದೆಂದೂ ಮತ್ತು ೪೬ನೇ ಸೆಕ್ಷನ್ ಮೇರೆ ಈ ಪಂಗ ಡದವರ ವಿದ್ಯಾಭ್ಯಾಸ, ಸಾಮಾಜಿಕ ಮತ್ತು ಆರ್ಥಿಕ ವಿಚಾರಗಳಲ್ಲಿ ಸರಕಾರವು ವಿಶೇ ಶ ಮೆಹನತ್ತು ವಹಿಸಬೇಕೆಂದೂ ನಮೂದಿ ಸಲಾಗಿದೆ. ಅಲ್ಲದೆ ಅವರಿಂಗೆ ನ್ಯಾಯವಿಧಾ ಯಕ ಮತ್ತು ಶಾರ್ಟಿಮೇಟು ಸಭೆಗಳಲ್ಲಿ ೧೦ ವರ್ಷಗಳ ವರೆಗ ಸ್ಥಳಗಳು ಜನಸಂ ಖ್ಯೆಯನ್ನನುಸರಿಸಿ ಕಾದಿಡಲ್ಪಡಬೇಕೆಂದೂ, ಸರ್ಕಾರಿ ಉದ್ಯೋಗಳ್ಲೂ ಕೂಡ ಯೋ ಗ್ಯ ಪಾಲು ಕೊಡಬೇಕೆಂದೂ ಸೂಚಿಸಲಾ ಗಿದೆ.

ಹಿಂದೂದೇಶದಲ್ಲಿ ಹಿಂದುಳಿದ (ಕ್ಯಾ ಸ್ಟಸ್) ಜಾತಿಯವರುಸುಮಾರು ೩ ಕೋ ಟಿ ಇರುವರು, ಮತ್ತು ಹಿಂದುಳಿದ (ಟ್ರೈ ಬ್ಸ್) ಪಂಗಡದವರು ಸುಮಾರು ೧೭೦ ಲ ಕ್ಷ ಇರುವರು. ೪೭೭ ಮೆಂಬರುಗಳಿರುವ ಜನತಾಸಭೆಯಲ್ಲಿ ಹಿಂದುಳಿದ ಜಾತಿಯವ ರಿಗೆ ೨೨ ಮತ್ತು ಹಿಂದುಳಿದ ಪಂಗಡದವರಿ ಗೆ ೩೩ ಸ್ಥಳಗಳಿರುವುವು. ಪ್ರಾಂತೀಕ ಎ ಸೆಂಬ್ಲಿಗಳಲ್ಲಿ ಒಟ್ಟಾಗಿ ೩೭೭ ಹಿಂದುಳಿದ ಜಾತಿಯವರ ಮತ್ತು ೧೮೨ ಹಿಂದುಳಿದ ಪಂ ಗಡದವರ ಪ್ರತಿನಿಧಿಗಳಿರುವರು. ಕೊಡ ಗಿನ ಎಸೆಂಬ್ಲಿಯಲ್ಲಿ ೩೪ ಮೆಂಬರುಗಳ ಪೈಕಿ ೬ ಜನ ಹಿಂದುಳಿದ ಜನರ ಪ್ರತಿನಿಧಿ ಗಳಿರುವರು. ಮಧ್ಯವರ್ತಿ ಮತ್ತು ಪ್ರಾಂತೀಕ ಸರಕಾರಗಳಲ್ಲಿ ೧೫ ಜನ ಹಿಂ ದುಳಿದ ಜಾತಿಯವರ ಮತ್ತು ೩ ಹಿಂದುಳಿ ದ ಪಂಗಡದವರ ಮಂತ್ರಿಗಳಿರುವರು.

ಈ ಭದ್ರತೆಗಳೆಲ್ಲವೂ ಸರಿಯಾಗಿ ಜಾರಿ ಗೆ ತರಲ್ಪಡುತ್ತಿವೆಯೋ ಮತ್ತು ಅವುಗ ಳಿಂದ ಎಷ್ಟರ ಮಟ್ಟಿಗೆ ಈ ಜನರ ಉದ್ಧಾ ರವಾಗುತ್ತಿದೆ ಎಂಬುದನ್ನು ಪರಾಂಬರಿಸು ತ್ತಿದ್ದು, ಆಗಿಂದಾಗ್ಗೆ ವರದಿ ಮಾಡಲು ರಾಜ್ಯ ಶಾಸನೆಯಲ್ಲಿ ಹೇಳಿರುವ ಮೇರೆ ಪೂ ರ್ತಿಯೂ ಸರಕಾರದ ಅಧ್ಯಕ್ಷರು, ಒಬ್ಬ ಕಮಿಷನರನ್ನು ನೇಮಿಸಬಹುದಾಗಿದೆ. ಹಾಗೆಯೇ ೧೯೩೦ ರಲ್ಲಿ ನೇಮಿಸಲ್ಪಟ್ಟ ಕಮಿಷನ್‌ರವರು ತಮ್ಮ ವರದಿಯನ್ನು ಅಧ್ಯಕ್ಷರಿಗೆ ಒಪ್ಪಿಸಿರುವರು. ಈ ವರದಿ ಯು ಮೇರೆ ಹಿಂದುಳಿದವರ ಏಳಿಗೆಯ್ಕೆ ಬಗ್ಗೆ ತಕ್ಕ ಮಟ್ಟಿಗೆ ಕೆಲಸ ಕಾರ್ಯಗಳು ಮೊದಲ್ಪಟ್ಟಿದ್ದರೂ, ಇನ್ನೂ ಮೊದಲುತುಂ ಬಾ ಉಳಿದಿದೆಯೆಂದು ಕಂಡು ಬರುತ್ತೆ.

ಈ ಜನರ ಉದ್ಧಾರವಾದರೂ ಸಾಮಾಜಿಕ ಸುಧಾರಣೆಯಿಂದಲೇ ಮುಖ್ಯವಾಗಿ ನಡೆ ಯಬೇಕಾಗಿದೆ. ಬರೀ ಕಾನೂನಿನ ಭದ್ರ ತೆಗಳು ಸಾಲವು. ಸಾಮಾಜಿಕ ಸುಧಾರ ಣೆಯು ಫಕ್ಕನೆ ಆಗುವಂತಹ ವಿಚಾರವಲ್ಲ. ನಿಧಾನವಾಗಿ ಸಾಗಬೇಕು. ಅಸ್ಪೃಶ್ಯತಾ ನಿವಾರಣೆಯು ತುಂಬಾ ಆಗಿದ್ದರೂ ಹಿಂದು ಳಿದ ಜಾತಿಯವರು ಇನ್ನೂ ಕೀಳು ತರದ ವೃತ್ತಿಯಲ್ಲೇ ಇಡಲ್ಪಟ್ಟಿರುವರು, ಮತ್ತು ಹಿಂದುಳಿದ ಪಂಗಡದವರು ಸುಧಾರಿತ ಜನ ರಿಂದ ದೂರವಾಗಿಯೇ ವಾಸಿಸುತ್ತಿರುವರು. ಹಲವು ಪ್ರಾಂತ್ಯಗಳು ಇವರ ಸುಧಾರಣೆ ಬಗ್ಗೆ ಕಾನೂನು ಕಾಯ್ದೆಗಳನ್ನು ಮಾಡಿ ದ್ದರೂ, ಧೈರ್ಯ ಕುಂದಿದ ಈ ಜನರು ಕರ್ತೃ ಹಕ್ಕುಬಾಧ್ಯತೆಗಳನ್ನು ಸಾರ್ವಜನಿ ಕರಂಪ ಹೊಂದಿಕೊಳ್ಳಲು ಅಲ್ಲಲ್ಲಿ ಹಿಂಜರಿ ಯುತ್ತಿರುವರು. ಕೆಲವು ಕಡೆ ಖಡ್ಡಾಯ ಕೆಲಸವು ಇವರಿಂದ ಮಾಡಿಸಲ್ಪಡುತ್ತಿದೆ. ಮಾಡಿದ ದುಡಿಮೆಗೆ ಕೆಲವು ನೇಳೆ ಪ್ರತಿ ಫಲವೇ ಕೊಡುತಿಲ್ಲ, ಎಂದೂ ಮುಂತಾಗಿ ಕಮಿಷನ್‌ನವರು ವರದಿ ಮಾಡಿರುವರು.

ಶತಮಾನಗಳಿಂದ ಮೂಲೆಗೊತ್ತಲ್ಪ ಟ್ಟ ಈ ಜನರನ್ನು ಬಲಾತ್ಕಾರದಿಂದ ಫಕ್ಕನೆ ಒಂದೇ ಸವನೆ ಮೇಲಕ್ಕೆ ಎತ್ತುವ ಪ್ರಯ ತ್ನದ ಬದಲು, ಅವರ ಪಂಗಡಗಳ ವಿಶೇಶತೆ ಮತ್ತು ಸಾಮಾಜಿಕ ವ್ಯವಸ್ಥೆಗಳನ್ನು ಕೆಡಿ ಸದೆ ಅತಿ ಕ್ಷರೆ ಮಾಡದೆ, ಅವರು ಮೇಲು ಜಾತಿಯವರೊಂದಿಗೆ ಏಳಿಕೆ ವಾಗುವಂತೆ ಯುಕ್ತ ಏರ್ಪಾಡುಗಳನ್ನು ಮಾಡುವುದು ಯೋಗ್ಯವಾಗಿದೆ. ಆದರೆ ೧೦ ವರ್ಷಗಳ ಲ್ಲಿ ಈ ಕೆಲಸವು ಸಾಕಷ್ಟು ನಡೆದು ಅವರಿ ಗಿರುವ ಖಾನೂನಿನ ಭದ್ರತೆಗಳನ್ನು ಸಡ ಲಿಸಲು ಸಾಧ್ಯವಾಗಬೇಕು, ಎಂಬ ಆ ಕಮಿ ಷನ್‌ನವರ ಅಭಿಪ್ರಾಯವು ಸೂಕ್ತವಾ ಗಿದೆ. ಇದನ್ನು ಸಾಧಿಸಲು ಸರ್ವರೂ ಸಹಕರಿಸುವರಾಗಿ ಆಶಿಸುತ್ತೇವೆ.

ವರ್ತಮಾನ.

ಕ್ಯಾಪ್ಟನ್ ಕೋಣೇರಿರ ಬೋಪಯ್ಯ ನವರು ಮದ್ರಾಸು ಗೌರ್ನರ ಎ.ಡಿ.ಸಿ. ಯವರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿ ಯ ಬರುತ್ತದೆ.

ಹಿಂದೂದೇಶದ ಮುಖ್ಯ ಸೇನಾಪತಿ ಗೆಳಾದ ಜನರಲ್ ಕೆ. ಎಂ ಕಾರ್ಯಪ್ಪನವ ರು ಈ ತಾ. ೨೩ರಲ್ಲಿ ಮಡಿಕೇರಿಗೆ ಬರುವ ರೆಂದು ತಿಳಿಯುತ್ತದೆ.

ಈ ತಾ. ೮ರಿಂದ ೧೪ರ ವರೆಗೆ ಮಡಿ ಕೇರಿಯಲ್ಲಿ ೯ ಇಂಚು ೧೧ ಸೆಂಟು ಮಳೆ ಯಾಗಿದೆ. ಹೆಚ್ಚಾಗಿ ಮಳೆ ಬಿದ್ದ ತಾ. ೧೨ರಲ್ಲಿ ೨ ಇಂಚು ೬೩ ಸೆಂಟ್ ಆಗಿದೆ.

ಮಡಿಕೇರಿ ಆಸ್ಪತ್ರೆಯಲ್ಲಿ ಡಾಕ್ಟರಾಗಿ ರುವ ಶ್ರೀ ಬಿಟ್ಟಿಯಂಡ ಸುಬ್ಬಯ್ಯನವರು ಕಲ್ಕತ್ತಾ ಯೂನಿವರ್ಸಿಟಿಯ ಎಂ. ಬಿ. ಬಿ. ಎಸ್. ಪರೀಕ್ಷೆಯಲ್ಲಿ ಪಾಸಾಗಿರುವ ರೆಂದು ತಿಳಿಯಬರುತ್ತೆ.

ಜಿಲ್ಲಾ ಬೋರ್ಡಿನ ಶಾಲೆಗಳನ್ನು ಸ ರಕಾರದವರು ವಹಿಸಿಕೊಳ್ಳುವ ವಿಚಾರ ಆಲೋಚನೆ ಮಾಡಲು ನೇಮಿಸಲ್ಪಟ್ಟಿರುವ ಮಿಡಿಯ ವಿಟಂಗು ಈ ತಾ. ೧೪ರಲ್ಲಿ ಮಡಿಕೇರಿಯಲ್ಲಿ ಸಭೆಯಾಗಲಿದೆಯೆಂದು ವರ್ತಮಾನ.

ಕೊಡಗಿನ ಹಲವು ಕಡೆ ಇಚ್ಛರ ವರಿ ಗೆ ಮಳೆಯು ಚೆನ್ನಾಗಿ ಬೀಳದೆ ವ್ಯವಸಾ ಯಕ್ಕೆ ತೊಂದರೆಯಾಗಿದ್ದು ಈಗ ೩ ದಿವಸ ಗಳಿಂದ ಸ್ವಲ್ಪ ಹೆಚ್ಚಾಗಿ ಮಳೆ ಬೀಳುತ್ತಿದೆ ಯೆಂದು ವರ್ತಮಾನ.

ಚೀಫ್ ಕಮಿಷನರು ತಾ. ೧೧ರಲ್ಲಿ ಡೆ ಲ್ಲಿಗೆ ಹೋಗಿರುವರು. ಅಲ್ಲದೆ ಮುಖ್ಯಮು ಖ್ಯಿಯವರು ತಾ. ೧೬ರಲ್ಲಿ ಡೆಲ್ಲಿಗೆ ಹೋ ಗುವರೆಂದೂ, ಇವರಿಬ್ಬರೂ ತಾ. ೨೨ರಲ್ಲಿ ಮರಳಿ ಕೊಡಗಿಗೆ ಬರುವರೆಂಬ ತಿಳಿಯು ತ್ತದೆ.

ಇಂಡಿಯಾ ಸರಕಾರದ ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಮದರಾಸು ಪ್ರಾಂತ್ಯದಲ್ಲಿ ಲೇಬರು ಇನ್ಸ್‌ಪೆ ಕ್ಟರಾಗಿದ್ದ ಶ್ರೀ. ಚಿರಿಯಪಂಡ ಬೋಪ ಯ್ಯ ಬಿ. ಎ. ಇವರನ್ನು ಆರಿಸಿ, ಕೇಂದ್ರ ಸ ರ್ಕಾರದ ಲೇಬರ್ ಇನ್ಸ್‌ಪೆಕ್ಟರಾಗಿ ಬೊಂ ಬಾಯಿಯಲ್ಲಿ ನೇಮಿಸಿರುವರು.

ಬೆಂಗಳೂರಿನ ರಿಕ್ರೂಟಿಂಗ್ ಆಫೀಸರ ವರ ತಂಗುವಿಕೆಯ ಕಾರ್ಯವು ಈ ಕೆಳಗಿನಂ ತೆ ಬದಲಾವಣೆಯಾಗಿ ಈ ಮೂಲಕ ತಿಳಿಸ ಲಾಗಿದೆ. ಆಗಸ್ಟ್ ತಾ. ೧೫ ಮತ್ತು ೧೬ ರಲ್ಲಿ ನಾಪೋಕ್ಲು, ೧೭ರಲ್ಲಿ ವೀರಾಜಪೇಟೆ, ೧೯ ಮತ್ತು ೨೦ರಲ್ಲಿ ಸೋಮವಾರಪೇಟೆ ಮತ್ತು ೨೧ರಿಂದ ೨೫ ರ ವರೆಗೆ ಮಡಿಕೇರಿ.

ಹಿಂದೂ ವೈಮಾನಿಕ ದಳದಲ್ಲಿ ಸೆಪ್ಟೆಂ ಬರ್ ೧೫ರಿಂದ ಪೂನಾದಲ್ಲಿಯೂ ಮತ್ತು ಅಕ್ಟೋಬರ್ ೩೧ರಿಂದ ಇತರ ಕೇಂದ್ರಗಳ ಲ್ಲಿಯೂ ಪ್ರಾರಂಭವಾಗುವ ತರಬೇತಿಗೆ ಜನರು ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಮೀಪದ ರಿಕ್ರೂಟಿಂಗ್ ಆಫೀಸನ್ನು ಸಂ ಧಿಸಬಹುದು.

ಎಗ್ರಿಕಲ್ಚರಲ್ ಇನ್‌ಕಮ್‌ಟ್ಯಾಕ್ಸ್ ಆಫೀಸರಾದ ಶ್ರೀ ಸಿ. ಆರ್. ಕೃಷ್ಣರಾಯ ರು ಈ ತಾ. ೪ರಿಂದ ೨೫ ದಿನಗಳು ರಜೆಯಲ್ಲಿ ಹೋಗಿರುವರು. ಇವರ ಗೈರುಹಾಜರಿನ ಲ್ಲಿ ಇವರ ಆಫೀಸಿನಲ್ಲಿರುವ ಶ್ರೀ ಬಿ. ಟಿ. ಗೋವಿಂದಯ್ಯನವರು ಇವರ ಕೆಲಸವನ್ನೆ ಲ್ಲಾ ನಡೆಸುವರು.

ಮಡಿಕೇರಿ ಸರ್ಕಾರಿ ಕಾಲೇಜಿನ ಕ ರ್ನಾಟಕ ಸಂಘದ ೧೯೩೮-'೩೯ರ ಪಾ ರ್ಥಸಾರಥ್ಯೋತ್ಸವವು ಈ ತಾ ೭ರಲ್ಲಿ ಕನ್ನಡ ಪಂಡಿತರಾದ ಶ್ರೀ ಕೆ. ಆರ್. ಉಡುಪರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯಮಂ ತ್ರಿಯಾದ ಶ್ರೀ ಸಿ. ಎಂ. ಪೂಣಚ್ಚನವರು ಭಾಷಣ ಮಾಡಿದರು.

ಈ ತಾ. ೧೦ರಿಂದ ೧೧ ವರ್ಷದ ವರೆಗೆ ಶ್ರೀ ಎಂ ಎಂ. ತಿಮ್ಮಯ್ಯನವರು (ಅಧ್ಯಕ್ಷ) ಶ್ರೀ ಕೆ. ಯಂ. ಕಾರ್ಯಪ್ಪನವರು ಮತ್ತು ಶ್ರೀ. ಹೆಚ್ ಬಿ. ಅಣ್ಣಯ್ಯನವರನ್ನು, ಪೂನಾ ಸೇಟಿಯ ಸ್ಪೆಷಲ್ ಬೆಂಚ್ ಮೆಜಿಸ್ಟ್ರೇಟ ರುಗಳಾಗಿಯೂ, ಶ್ರೀ ಹೆಚ್ ಚಂದ್ರಶೇಖರ ಯ್ಯನವರು, (ಅಧ್ಯಕ್ಷರು) ಶ್ರೀ ಎಂ. ಪಿ. ಅಪ್ಪಯ್ಯನವರು ಮತ್ತು ಶ್ರೀ. ಡಿ. ಬಿ. ಜೋಯಪ್ಪನವರು, ಸೋಮವಾರಪೇಟೆ ಯ ಸ್ಪೆಷಲ್ ಬೆಂಚ್ ಕೋರ್ಟ್ ಮೆಜಿ ಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿರುವರು.

ವಯಸ್ಕರ ಶಿಕ್ಷಣದ ಪರೀಕ್ಷೆಯಲ್ಲಿ ಜನಾರ್ದನ ಹಳ್ಳಿಯ ಶಾಲೆಯಲ್ಲಿ ೩೫ರಲ್ಲಿ ೩೫, ಶನಿವಾರಸಂತೆಯ ಶಾಲೆಯಲ್ಲಿ ೩೪ ರಲ್ಲಿ ೨೫, ಸೋಮವಾರಪೇಟೆ ಶಾಲೆಯಲ್ಲಿ ೨೭ರಲ್ಲಿ ೧೪, ಕೆಕ್ಕೆರಹಳ್ಳಿ ಶಾಲೆಯ ಲ್ಲಿ ೨೭ರಲ್ಲಿ ೧೧, ಶಾಂತಳ್ಳಿ ಶಾಲೆಯಲ್ಲಿ ೩೦ರಲ್ಲಿ ೨೭, ತಾಕೇರಿ ಶಾಲೆಯಲ್ಲಿ ೨೦ರಲ್ಲಿ ೧೮, ವಾಲ್ನೂರು ತ್ಯಾಗತ್ತೂರು ಶಾಲೆಯ ಲ್ಲಿ ೩೧ರಲ್ಲಿ ೯ ಮತ್ತು ಬೆಂಬಳೂರು ಶಾಲೆ ಯಲ್ಲಿ ೨೪ರಲ್ಲಿ ೧೩ ಜನರು ಪಾಸಾಗಿರುವ ರು. ಒಟ್ಟು ೨೦ ಶಾಲೆಗಳಲ್ಲಿ ೪೪೪ರಲ್ಲಿ ೩೩೮ ಜನರು ಪಾಸಾಗಿರುವರು.

ವಾರ್ತೆ.

ಹೈದರಾಬಾದಿನ ರಾಮನ್ನಪೇಟೆ ಎಂ ಬಲ್ಲಿ ೩ ತಿಂಗಳ ಮಗುವೊಂದು ೧೮ ವಯ ಸ್ಸಿನ ಯುವಕನಂತೆ ಮಾತನಾಡುತ್ತಿ ಯಂತೆ.

ಅಸ್ಸಾಮಿನ ಗುಡ್ಡಕಾಡಿನಲ್ಲಿರುವ ಹಿಂದು ಜನಾಂಗದಲ್ಲಿ ಗಂಡಸರ ಬದಲು ಹೆಂಗಸರೇ ದುಡಿಯುತ್ತಿರುವರಂತೆ. ಆ ಗಂ ಡಸರು ಜಗತ್ತಿನ ಉಳಿದ ಭಾಗದಲ್ಲಿ ಗಂಡ ಸರು ದುಡಿಯುತ್ತಿರುವರೆಂಬುದನ್ನು ಕೇಳಿ ಬಹಳ ಆಶ್ಚರ್ಯಪಟ್ಟರಂತೆ.

ಕಳೆದ ವಾರ ಮುಕ್ತಾಯವಾದ, ಲಿವರ್ಪೂಲಿನ ಜಾಗತಿಕ ಕ್ರೀಡಾಸ್ಪರ್ಧೆಯಲ್ಲಿ, ಮೂರು ಚಿನ್ನದ ಪದಕಗಳನ್ನು ಪಡೆದ, ಜೆಕೋಸ್ಲೋವಾಕ್ಯದ, 'ಎಮಿಲಾಜೆಟೋಪೆ ಕ್'ರನ್ನು 'ಮಿಸ್ಟರ್ ಆಲೋಂಪಿಕ್ಸ್'ರೆಂ ದು ಪರಿಗಣಿಸಿರುವರು.

ಕೊಯಿಲ್‌ಪಬ್ಬಿಗೆ ಸೇರಿದ ವಿಲಾತ ಕುಲಂ ಎಂಬ ಗ್ರಾಮದಲ್ಲಿ ಕೋಳಿ ಜೂ ಜಾಡುತಿದ್ದ ೧೦೭ ಜನರನ್ನು ದಸ್ತಗಿರಿ ಮಾಡಿ, 'ಗೇಮಿಂಗ್ ಆಕ್ಟ್' ಪ್ರಕಾರ ಇವ ರಿಗೊಬ್ಬೊಬ್ಬರಿಗೆ ರೂ. ೫ ಜುಲ್ಮಾನೆಯ ನ್ನು ವಿಧಿಸಿದರು. ಜುಲ್ಮಾನೆಯಿಂದ ರೂ. ೫೩೫, ದಸ್ತಗಿರಿ ಮಾಡಿದ ೧೩೭ ಹುಂಜಗ ಳ ಹರಾಜಿನಿಂದ ೩೬೫ ರೂ. ಗಳೂ ಸರ ಕಾರಕ್ಕೆ ದೊರೆಯಿತು.

ಕೃತಜ್ಞತಾ ವಂದನೆ.

ತಾರೀಕು ೧೦-೪-೪೭ ನೇ ಆದಿತ್ಯ ವಾರ ಶಿವಾಧೀನರಾದ ನನ್ನ ತಂದೆ ಮುದ್ದ ಯ್ಯನವರ ವಿಯೋಗದ ಕಾಲದಲ್ಲಿ ಪ್ರತ್ಯಕ್ಷ ರಾಗಿ ಬಂದು ಮತ್ತು ನನಗೂ, ನನ್ನ ಸ ಹೋದರರಿಗೂ, ಮತ್ತು ನನ್ನ ಮಾತೃ ಶ್ರೀಯವರಿಗೂ ಸಂತಾಪ ಸೂಚನಾ ಪತ್ರ ಬರೆದು ನಮ್ಮ ದುಃಖದಲ್ಲಿ ಭಾಗಿಗಳಾಡಿ ಭಂಧು ಮಿತ್ರರನ್ನು ಪ್ರತ್ಯೇಕ ಬರೆದು ವಂ ದಿಸುವುದು ಅಸಾಧ್ಯವಾದ ಕಾರಣ ಅವರೆಲ್ಲ ರಿಗೂ ಈ ಮೂಲಕ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಕುಂಡ್ಯೋಡ ಎಂ. ಚಂಗಪ್ಪ,
ಐಮಂಗ್ಲ ಗ್ರಾಮ,
ವೀರಾಜಪೇಟೆ.

॥ ಪ್ರಜಾ ಸರಕಾರವೂ, ಪಾರ್ಟಿ ತತ್ವವೂ. ॥

ಲೇ ಶ್ರೀ ಪಿ. ಜಿ. ಐಯ್ಯಪ್ಪ, ಮಡಿಕೇರಿ.

ಒಂದೊಂದು ವಿಷಯಗಳು ಒಂದೊಂದು ಸಮಯದಲ್ಲಿ ಜಾಸ್ತಿ ಮುಖ್ಯತೆಯನ್ನು ಪಡೆದು ಜನರ ಸಂಭಾಷಣೆಗೂ, ಪತ್ರಿಕೆಗಳ ಲೇಖನಗಳಿಗೂ, ಭಾಷಣಕಾರರ ಬರವಣಿಗೆಗೂ ಆಸ್ಪದಕಾರಿಗಳಾಗುವುದು ಈಗ ಕೆಲವು ದಿವಸಗಳ ಹಿಂದೆ, ಕೊಡಗು ಪ್ರತ್ಯೇಕ ಪಾರ್ಟಿಯವರು ಕಾಂಗ್ರೆಸಿನೊಳಗೆ ಸೇರುವ ವಿಚಾರವನ್ನು ಮುಂದಿಟ್ಟು ತಮ್ಮ ಮನೋರಥವನ್ನು ಕಾಂಗ್ರೆಸ್ ಪಕ್ಷ ವಲಯಕ್ಕೆ ತಿಳಿಸಿದಾಗ್ಗೆ, ಈ ವಿಷಯವು ಸ್ವಲ್ಪ ಜನರ ಗಮನವನ್ನು ಕೂಡಿದಲ್ಲೆಲ್ಲ ಚರ್ಚೆಯಾಗಿದ್ದಲ್ಲದೆ, ಪ್ರತ್ಯೇಕ ಪತ್ರಿಕೆಗಳಲ್ಲಿ ಜಾಹಿರಾತುಗಳೂ, ಲೇಖನಗಳೂ ಹೊರಬಿದ್ದವು. ಆದರೆ ಕೆಲವು ದಿವಸಗಳ ಹಿಂದೆ ತಮ್ಮ ರಾಜಕೀಯ ಪಟ್ಟುಗಳಲ್ಲೂ ಮತ್ತು ಪಾರ್ಟಿಪತ್ರಿಕೆಗಳಲ್ಲೂ ಈ ಸಂಬಂಧವಾಗಿ ಕಲಿಪೋಕಾದ ಉಷ್ಣತೆ, ಉದ್ರೇಕಗಳು ಕ್ರಮಶಃ ಶಾಂತವಾಗುತ್ತ ಬಂತು.

ಪ್ರತ್ಯೇಕವಾದಿಗಳ ನಿರ್ಣಯವು ಸರಿಯೋ ತಪ್ಪೋ ಎಂಬುದನ್ನು ವಿವರಿಸುವುದಾಗಲೀ ಈ ಕಾಂಗ್ರೆಸ್ ಪಾರ್ಟಿಯವರು ಇತರರನ್ನು ಪುನಃ ತಮ್ಮ ಪಾರ್ಟಿಗೆ ತೆಗೆದುಕೊಳ್ಳಬೇಕೋ ಯಾ ಬಾರದೋ ಎಂಬ ವಿಷಯವನ್ನು ವ್ಯಕ್ತ ಪಡಿಸುವುದಾಗಲೀ ಪ್ರಸ್ತುತ ಈ ಲೇಖನದ ಅಭಿಲಾಷೆಯಲ್ಲ. ವಸ್ತುವಾಗಿ ಪ್ರಜಾ ಪ್ರತಿನಿಧಿ ಸರಕಾರ ಸಮರ್ಥವಾಗಿ ಸಾಗಬೇಕಾದರೆ ಶಾಸನ ಸಭೆಗಳಲ್ಲಿ ಎರಡು ಯಾ ಹೆಚ್ಚು ಪಾರ್ಟಿಗಳಿದ್ದೇ ತೀರಬೇಕೋ ಇಲ್ಲವೋ ಎಂಬುದನ್ನು ವಿವರಿಸುವುದೇ ಈ ಲೇಖನದ ಉದ್ದೇಶ. ಪ್ರಜಾಪ್ರಭುತ್ವ ಸರಕಾರ ಸಮರ್ಥವಾಗಿ ನಡೆಯುವುದಕ್ಕೆ ಶಾಸನ ಸಭೆಗಳಲ್ಲಿ ಇಂತಹ್ಯಕ್ಕೆ ಹೆಚ್ಚು ಪಾರ್ಟಿಗಳಿದ್ದೇ ತೀರಬೇಕು ಎಂಬ ಒಂದು ಸರಿಯಾದ ಭ್ರಾಂತಿಯನ್ನೇಕ ಪ್ರಜಾಪ್ರಭುತ್ವ ಪ್ರಿಯರಲ್ಲಿ ಬೇರೂರಿರುವಂತೆ ಕಾಣುತ್ತದೆ. ಈ ಅಭಿಪ್ರಾಯವು ಬರೀ ಬೇರೆಯವರು ನೋಡಿದುದನ್ನು ಅಥವಾ ನೂತನವಾದವನ್ನು ಹೋದಲ್ಲಿ ನಾವೂ ಸಹ ಹಾಗೆಯೇ ಮಾಡಬೇಕೆಂಬ ಬುದ್ಧಿಹೀನದ ಜನಸಾಮಾನ್ಯ ತಿಳುವಳಿಕೆಯಲ್ಲದೆ ಸ್ವತಂತ್ರವಾಗಿ ಕಾಲ, ದೇಶ ಸ್ಥಿತಿಗತಿಗಳನ್ನು ಅನುಲೋಮ, ವಿಲೋಮ, ಅಂತಹ ಯೋಚನೆಯು ಫಲಿತಾಂಶವಾಗಿ ಜನಿಸಿದ ತಿಳುವಳಿಕೆ ಎಂದು ಹೇಳಲು ಸಾಧ್ಯವಿಲ್ಲ.

ಇಂಗ್ಲೆಂಡ್ ಯೂ ಅಮೆರಿಕಾ ದೇಶಗಳಲ್ಲಿ ಈ ಪಾರ್ಟಿ ತತ್ವಗಳು ಪ್ರಬಲವಾಗಿರುವುದರಿಂದ ನಾವೂ ಸಹ ಆ ಮೇಲ್ಪಂಕ್ತಿಯನ್ನೇ ಅನುಸರಿಸಬೇಕು. ಇದಾದರೆ ನಿಜವಾದ ಪ್ರಜಾ ಸರಕಾರವು ಪಡೆಯಲಾರ್ತದ್ದು ಎನ್ನುವುದಾಗಿ ತನ್ಮೂಲಿ ಕೆಲವರ ಧಾವನೆಯೂಗಿದೆ. ಇದು ಎಷ್ಟರ ಮಟ್ಟಿಗೆ ನಿಜ ಎಂಬುದನ್ನು ಕೂಲಂಕಷವಾಗಿ ವಿವೇಚಿಸುವುದೇ ಈ ಲೇಖನದ ಉದ್ದೇಶ. ಪ್ರಜಾಪ್ರಭುತ್ವ ಸರಕಾರ ಸಮರ್ಥವಾಗಿ ನಡೆಯುವುದೇಕಾದರೆ ಶಾಸನ ಸಭೆಗಳಲ್ಲಿ ಇಂತಹ್ಯಕ್ಕೆ ಹೆಚ್ಚು ಪಾರ್ಟಿಗಳಿದ್ದೇ ತೀರಬೇಕು ಎಂಬ ಒಂದು

ಪ್ರಜಾಸರಕಾರದ ಶಾಸನ ಸಭೆಗಳಲ್ಲಿ ಪಾರ್ಟಿಗಳಿದ್ದೇ ಇರಬೇಕೆಂಬ ಒಂದು ಭ್ರಾಂತಿಗೆ ಕಟ್ಟುಬಿದ್ದು ಅವರು ವಿರೋಧಿ ಪಕ್ಷದವರೆಂದು ಹೇಳಿಸಿಕೊಳ್ಳಬೇಕೇ ವಿನಹ, ದೇಶದ ಏಳ್ಗೆಗೆ ಕೆಲಸ ಮಾಡುವುದೇ ಇವರ ನಿಜವಾದ ಗುರಿಯಾದರೆ, ಇವರು ಖಂಡಿತವಾಗಿಯೂ ಕಾಂಗ್ರೆಸ್ ಪಕ್ಷಕ್ಕೆ ತಮ್ಮ ಒಪ್ಪತದ ಬೆಂಬಲವನ್ನು ಕೊಟ್ಟೇತೀರಬೇಕು. ತತ್ವವಿಲ್ಲದ ಒಂದು ರೀತಿಯ ಕೃತ್ರಿಮ ವಿಭಾಗವನ್ನು ಇಟ್ಟುಕೊಳ್ಳುವುದರಲ್ಲಿ ಅರ್ಥವೇ ಇಲ್ಲ. ಅದರಲ್ಲೂ, ಕಾಂಗ್ರೆಸ್ ಪಾರ್ಟಿಗೆ ಸಂಪೂರ್ಣ ಮೆಜಾರಿಟಿ ಇರುವಾಗ್ಯೆ, ವೈನರ್ ಪಾರ್ಟಿಯೂದ ಇವರು, ಕಾಂಗ್ರೆಸ್ ಧ್ಯೇಯಕ್ಕೆ ಯಾವ ವಿಧದಲ್ಲೂ ವಿರೋಧವಿಲ್ಲದಿರುವಾಗ್ಯೆ, ಇವರು ಬೇರೆ ಇದ್ದು ಮಾಡುವುದಾದರೂ ಏನು? ಅವರು ವಿರೋಧಿಗಳಾಗಿಯೇ ಏಂತರೆ, ಅದರಿಂದ ದೇಶಕ್ಕೆ ಒಳ್ಳೆಯದಾಗುವುದರ ಬದಲು, ಕೆಲವು ಸಂದರ್ಭಗಳಲ್ಲಿ ಹಾನಿಯೇ ಆಗಬಹುದು. ಹೇಗೆಂದರೆ, ಸಭೆಯಲ್ಲಿ ಎರಡು ಪಾರ್ಟಿಗಳಿವೆ ಎಂದ ಮೇಲೆ, ಒಂದು ಹೇಳಿ ಮಂತ್ರಿಮಂಡಳಿಯವರು ಏನಾದರೂ ತಪ್ಪು ಮಾಡಿದರೂ, ಸಹ ವಿರೋಧ ಪಾರ್ಟಿಯವರು ಅದನ್ನು ಖಂಡಿಸಿದಾಗ, ವಿರೋಧ ಪಾರ್ಟಿಯವರ ವಾದದಲ್ಲಿ ಎಷ್ಟೇ ನ್ಯಾಯವಿದ್ದಾಗ್ಯೂ ಪಾರ್ಟಿತತ್ವಕ್ಕೆ ಕಟ್ಟುಬಿದ್ದು ಮೆಜಾರಿಟಿ ಪಾರ್ಟಿಯವರು ಮಂತ್ರಿಗಳನ್ನೇ ಅನುಮೋದಿಸಬೇಕಾಗುತ್ತದೆ. ಅದಲ್ಲದೆ ಎದುರು ಪಾರ್ಟಿಯವರ ನ್ಯಾಯಕ್ಕೆ ತಲೆ ಬಗ್ಗಿಸಿ, ಮೆಜಾರಿಟಿ ಪಾರ್ಟಿಯ ಕೆಲವು ಸದಸ್ಯರು, ಪಾರ್ಟಿಗೆ ವಿರೋಧ ಅಭಿಪ್ರಾಯ ಕೊಟ್ಟಿತೆ, ಅವರ ಮೇಲೆ, ಪಾರ್ಟಿ ಕ್ರಮ ಜರಗಿಸುವರು ಎಂಬ ಹೆದರಿಕೆ ಅವರಿಗಿರುತ್ತದೆ. ಅದರ ಬದಲು, ಇಡೀ ಎಸೆಂಬ್ಲಿಯಲ್ಲಿ ಒಂದೇ ಪಾರ್ಟಿಯಾದರೆ, ಮಂತ್ರಿಮಂಡಲಿಯವರಿಗೆ ಸಿಕ್ಕಾಬಟ್ಟೆ ಪ್ರವರ್ತಿಸಲು ಧೈರ್ಯವಿರುವುದಿಲ್ಲ.

ಎರಡನೆಯದಾಗಿ, ಸರಕಾರವನ್ನು ನಡೆಸುವವರು ದೇಶದ ಏಳಿಗೆಗೆ ಕುಂದಕ್ಕೆ ತರುವ ರೀತಿಯಲ್ಲಿ ವರ್ತಿಸಿದಾಗ, ಅಂತಹ ವರ್ತನೆಯನ್ನು ವಿರೋಧ ಪಾರ್ಟಿಯವರಿಗೆ ನೂಕ್ಷ್ಮ ತೀಕಿಸುವ, ಯೂ ಪ್ರಶ್ನಿಸುವ ಅಧಿಕಾರವಿದೆ' ಎಂದು ತಿಳಿಯುವುದೂ ಶುದ್ಧ ತಪ್ಪು. ಶಾಸನ ಸಭೆಯ ಯಾವನೊಬ್ಬ ಸದಸ್ಯನಿಗೂ, ಆ ಅಧಿಕಾರವಿದೆ. ನಮ್ಮ ಪಾರ್ಟಿಯ ಮಂತ್ರಿಮಂಡಲವಾದುದರಿಂದ, ಅವರು ಮಾಡಿದ ಯಾವ ಕೆಲಸಕ್ಕೆ ಆಗಲೀ ನಾವು ಮೂಕಾಡದೆ ಬೆಂಬಲ ಕೊಡಬೇಕು ಎಂಬುವುದು ಎಲ್ಲಿಯೂ ಇಲ್ಲದ ಸಂಗತಿ.

ಮೂರನೆಯದಾಗಿ ಶ್ರೀ. ಬೆಳ್ಯಪ್ಪನವರು, ಮತ್ತು ಅವರ ಪಾರ್ಟಿಯವರು ವಿರೋಧಪಕ್ಷದಲ್ಲೇ ನಿಂತರೆ, ಅವರಿಗೆ ಕಾಂಗ್ರೆಸ್ ಪಾರ್ಟಿಯವರ ಎಸೆಂಬ್ಲಿಯ ಹೊರಗೆ ನಡೆಯುವ ವಿಂಟೆಂಗುಗಳಲ್ಲಿ ಚರ್ಚಿಸಲ್ಪಡಬಹುದಾದ, ದೇಶದ ಮುಂದಿನ ರಚನಾತ್ಮಕ ಕಾರುಬಾರುಗಳಲ್ಲಿ ಭಾಗವಹಿಸುವ, ಮತ್ತು ತಮ್ಮ ಅಭಿಪ್ರಾಯಗಳನ್ನು ತೊಡಗಿಸುವ ಸಂದರ್ಭವೇ ಸಿಕ್ಕುವುದಿಲ್ಲ. ಕಾಂಗ್ರೆಸ್ ಪಾರ್ಟಿಗೆ ಸೇರಿದರೆ, ಮಂತ್ರಿಮಂಡಲಿಯವರು ಯಾವ ರೀತಿಯಲ್ಲಿ ವರ್ತಿಸುತ್ತಾರೆಂಬುವುದು ಅವರಿಗೂ ತಿಳಿಯುತ್ತದೆ. ಈ ತಳೆದ ಜುನಾವಣೆಯಲ್ಲಿ ಉತ್ತರ ಕೊಡಗಿನಲ್ಲಿ ಎಲ್ಲರೂ ಕಾಂಗ್ರೆಸ್ ಉಮೇದುವಾರರೇ ಜಯಶೀಲರಾಗಿ, ದಕ್ಷಿಣ ಕೊಡಗಿನಿಂದ ಪ್ರತ್ಯೇಕ ಉಮೇದುವಾರರೇ ಹೆಚ್ಚಾಗಿ ಜಯಶೀಲರಾಗಿ ಬಂದಿರುವುದರಿಂದ, ಈ ಎರಡೂ ಪಾರ್ಟಿಗಳೂ ಒಂದಾಗದಿದ್ದರೆ, ಹೊಸದಾಗಿ ಸ್ಥಾಪಿತವಾಗಿರುವ ಈ ಸರಕಾರದ ಕಾರ್ಯಕಲಾಪಗಳಲ್ಲಿ ಪ್ರಾಯಶಃ ಅರ್ಧ ಪ್ರಾಂತ್ಯದವರಿಗೇ ಭಾಗವಹಿಸಲಿಕ್ಕೆ ಅನಾನುಕೂಲವಾದಂತಾಗುತ್ತದೆ. ಇದು ಎಂದೆಂದಿಗೂ ದೇಶದ ಏಳಿಗೆಗೂ ಜನರ ಅಭಿವೃದ್ಧಿಗೂ ಒಳ್ಳೆಯದಲ್ಲವೆಂಬುವುದೇ ನನ್ನ ಭಾವನೆ. ಇದನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿದರೆ, ಶ್ರೀ. ಮಂದಣ್ಣನವರು ತಮ್ಮ ಅಭಿಪ್ರಾಯವನ್ನು ಬದಲಾಯಿಸಿಯಾರೆಂದು ಆಶಿಸುತ್ತೇನೆ.

ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಧ್ಯೇಯಗಳನ್ನು ನಿರ್ಧರಿಸುವ ಪಾರ್ಲಿಮೆಂಟ್‌ಗಳಲ್ಲಿ ಒಂದು ವೇಳೆ ಭಿನ್ನಾಭಿಪ್ರಾಯಗಳ ಪಾರ್ಟಿಗಳಿರುವದು ಅವಶ್ಯವಾಗಿ ಕಂಡುಬಂದರೂ ಸಹ ಯೂನಿಯನ್ ಸರಕಾರದ ಶಕ್ತಿಗಳನ್ನನುಸರಿಸಿ, ಪಡೆಯಬೇಕಾದ, ಸ್ಟೇಟ್ ಶಾಸನ ಸಭೆಗಳಲ್ಲಿ, ಅದರಲ್ಲೂ ಸಿ. ಸ್ಟೇಟಾದ, ನಮ್ಮ ಸಭೆಯಲ್ಲಿ ಪಾರ್ಟಿಗಳಿಗೆ ಎಡೆಯೇ ಇಲ್ಲವೆನ್ನಬೇಕು. ಅದೂ ಅಲ್ಲದೆ ಇರುವ ಎರಡು ಪಾರ್ಟಿಗಳಲ್ಲೂ ಆಪರವಡೊಳಗೆ ಇದ್ದ ಒಂದೇ ಒಂದು ಶಕ್ತವ್ಯತ್ಯಾಸವು, ಮೊದಲಾದ ಮೇಲೆ ಬರೇ ತೋರಿಕೆಗಾಗಿ ಒಂದು ಅಲ್ಪ ಮೆಜಾರಿಟಿಯ ಕೃತ್ರಿಮ ಪಾರ್ಟಿಯನ್ನಿಟ್ಟು ಕೊಳ್ಳಬೇಕೆಂಬುವುದು ಏನೂ ತಿರುಳಿಲ್ಲದ ವಾದವೆಂದೇ ನನಗನಿಸುತ್ತದೆ.

ಪ್ರಪಂಚದ ಕ್ರೀಡಾರಂಗ

ಫಿನ್‌ಲಂಡದ ಹೆಲ್ಸಿಂಕಿಯಲ್ಲಿ ೧೫ನೇ ಜಾಗತಿಕ ಕ್ರೀಡಾ ಸ್ಪರ್ಧೆಯು ಕಳೆದ ಜುಲೈ ತಿಂಗಳ ೧೯ ರ ದಿನಪ್ರಾರಂಭವಾಗಿ ಇದೇ ತಿಂಗಳ ಮೂರನೇ ತಾರೀಖಿನ ದಿವಸ ಮುಕ್ತಾಯವಾಯಿತು. ಜಗತ್ತಿನಲ್ಲಿಯ ಎಲ್ಲಾ ರಾಷ್ಟ್ರಗಳಿಂದಲೂ ಕೂಡಿ ೫,೮೭೦ ಜನ ಕ್ರೀಡಾಪಟುಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಸ್ಪರ್ಧಾಳುಗಳಲ್ಲಿ ಸ್ತ್ರೀ-ಪುರುಷರಿಬ್ಬರೂ ಇದ್ದರು. ದೇಶ-ವಿದೇಶಗಳಿಂದ ಬಂದ ೭೦,೦೦೦ ಪ್ರೇಕ್ಷಕರು ಜಾಗತಿಕ ಕ್ರೀಡೆಗಳನ್ನು ನೋಡಿ ನಲಿದರು.

ಸ್ಪರ್ಧೆಯು ಆಟದಲ್ಲಿ ಹಾಕಿ, ಫುಟ್ ಬಾಲ್, ವಾಟರ್‌ಪೋಲೋ, ಭಾರ ಎತ್ತುವುದು, ಗುಂಡು ಎಸೆಯುವುದು, ಎತ್ತರ ಹಾರುವುದು, ಉದ್ದ ಜಿಗಿಯುವುದು, ಓಟ ಕುಸ್ತಿ, ಈಜುವುದು, ಇವೇ ಮೊದಲಾದ ಆಟಗಳಿದ್ದವು. ಮೊದಲು ಬೇರೆ ಬೇರೆ ತಂಡಗಳ ನಡುವೆ ಸ್ಪರ್ಧೆ ನಡೆದು ಅದರಲ್ಲಿ ಜಯಪಡೆದವರು ಕಂಚಿನ ಪದಕ ಪಡೆದರು. ಜಯಶಾಲಿಯಾದವರಲ್ಲಿ ಮತ್ತೆ ಸ್ಪರ್ಧೆ ನಡೆದು ಅದರಲ್ಲಿ ವಿಜಯಿಯಾದವರಿಗೆ ರಜತ ಪದಕ ದೊರೆಯಿತ್ತು. ಆ ಸ್ಪರ್ಧೆಯಲ್ಲಿ ಗೆದ್ದವರಲ್ಲಿ ಮತ್ತೆ ಏರಾಟ ನಡೆದು ಅಂತಿಮ ವಿಜಯಪಡೆದವರು ಸುವರ್ಣ ಪದಕ ಪಡೆದರು. ಅನೇಕರಿಕೆಯು ಎಲ್ಲಾಕ್ಕೂ ಹೆಚ್ಚು ಸುವರ್ಣ ಪದಕಗಳನ್ನು, ರಜತ ಪದಕಗಳನ್ನೂ, ಕಂಚಿನ ಪದಕಗಳನ್ನೂ, ಪಡೆಯಿತು. ಅದರ ತರುವಾಯ ಎರಡನೇ ಕ್ರಮಾಂಕ ಪಡೆದ ದೇಶವೆಂದರೆ ರಶಿಯಾ. ಭಾರತ ಹಾಕಿ ಆಟದಲ್ಲಿ ಜಗತ್ತಿನಲ್ಲಿಯೇ ಸರ್ವ ಶ್ರೇಷ್ಠವೆಂದು ಸುವರ್ಣ ಪದಕ ಪಡೆಯಿತು. ಮತ್ತು ಈಸ್ತಿಯಲ್ಲಿ-ಕಂಚಿನ ಪದಕ ಪಡೆಯಿತು.

ಅವಿದ್ಯಾವಂತ ಇಂಜಿನಿಯರ್

ಪೂರ್ವ ಬಂಗಾಳದ ನಿವಾಸಿಯೊಬ್ಬನು ಹೆಚ್ಚು ಕಮ್ಮಿ ವಿದ್ಯಾಹೀನನಾಗಿದ್ದರೂ, ತಾನೊಬ್ಬ ಕಾಶೀ ವಿಶ್ವವಿದ್ಯಾನಿಲಯದ ಇನ್ನೆದ ಪದವಿ ಹೊಂದಿದ ಇಂಜಿನಿಯರಿಂಗ್ ಗ್ರಾಜುಯೇಟು ಎಂಬ ಸುಳ್ಳು ಹೆಸರಿಂದ ಪ. ಬಂಗಾಳದ ಮುಖ್ಯ ಮಂತ್ರಿಯಾದ ಡಾ ಬಿ. ಸಿ. ರಾಯ್‌ರವರ ಹತ್ತಿರ ಸುಳ್ಳು ಪತ್ರವನ್ನು ಪಡೆದು ಅಲ್ಲಿಯ ಜೋಫ್ ವಿದ್ಯುಚ್ಛಕ್ತಿ ಇಂಜಿನಿಯರವರಿಂದ ಅಸಿಸ್ಟೆಂಟ್ ಇಂಜಿನಿಯರ್ ಹುದ್ದೆಯನ್ನು ಸಂಪಾದಿಸಿದನು. ಆದರೆ ಬೇಗನೆ ಸಿಕ್ಕಿ ಬಿದ್ದನು! ತಾನು ಹೊಂದಿಕೊಂಡ ಆರ್ಡರ್. ಗಳಿಗೆ 'ರಿಸೀವ್ಡ್' ಎಂದು ಬರೆಯುವಲಾರದೆ ಗಟ್ಟು ಹೊರಬಿದ್ದಿತು. ಕೂಡಲೇ ನೋಸ ಗೊಳಿಸಿದನೆಂದು ಪೋಲೀಸರಿಗೆ ಒಪ್ಪಿಸಿದರು.

ಸಹಕಾರದಲ್ಲಿ ಕೊಡಗಿಗೆ ಒಂದನೇ ಸ್ಥಾನ.

ಹಿರಿದೂದೇಶದಲ್ಲಿ ಸಹಕಾರಿ ಚಳವಳಿಯ ಭೌಗೋಳಿಕ ಬೆಳವಣಿಗೆಯು ಬಹಳ ಹೆಚ್ಚು ಕಮ್ಮಿಯಾಗಿದೆ. ವಿಂಧ್ಯ ಪ್ರದೇಶದಲ್ಲಿ ಒಂದು ಲಕ್ಷ ಜನಸಂಖ್ಯೆಗೆ ಬರೇ ೩೯ ಸಂಘಗಳಿರುವಲ್ಲಿ ಕೊಡಗಿನಲ್ಲಿ ಒಂದು ಲಕ್ಷ ಜನಸಂಖ್ಯೆಗೆ ೨೦೩ ಸಂಘಗಳಿವೆ ಎಂದು ಇಂಡಿಯಾ ಸರಕಾರದ ಆಹಾರ ಮತ್ತು ವ್ಯವಸಾಯ ಇಲಾಖೆಯ ಮಂತ್ರಿಯಾಗಿದ್ದ ಶ್ರೀ ಕೆ. ಯಂ. ಮುನ್ಷಿಯವರ್ ಕಳೆದ ಫೆಬ್ರವರಿ ತಾರೀಖು ೨೭ ರಲ್ಲಿ ಮದ್ರಾಸ್ ಬೈಯಲ್ಲಿ ನಡೆದ ಅಖಿಲ ಭಾರತ ಸಹಕಾರಿ ಕಾಂಗ್ರೇಸಿನ ಉದ್ಘಾಟನಾ ಭಾಷಣದಲ್ಲಿ ಹೇಳಿದರು.

'ಕೊಡಗು' ಪತ್ರಿಕೆಯ ಏಜೆಂಟರು ಶ್ರೀ ಚೋಕಿರ ಮೊಣ್ಣಪ್ಪನವರು.
ನಾಪೋಕ್ಲಿಗೆ

ಮುಖತ್ತು.

ಈಗ ಹೊಸದಾಗಿ ಬಂದಿರುವ ಹಮ್ಮ ಅವೇರಿಕನ್ ಫೌಂಟನ್ ಪೆನ್ನುಗಳಿಗೆ ಆರ್ಡರು ಬುಕ್ ಮಾಡಲು ಏಜಂಟರು ಬೇಕಾಗಿದ್ದಾರೆ. ಇದಕ್ಕೆ ಪ್ರತಿಯಾಗಿ 15 ಯೂ 17 ಜ್ಯುವೆಲ್‌ಗಳುಳ್ಳ ಸ್ವಿಸ್ ರಚಿತ ರಿಸ್ಟ್‌ವಾಚು, ಸೈಕಲ್, ಅಥವಾ ರೇಡಿಯೋವು ಮುಖತ್ತಾಗಿ ದೊರೆಯುವುದು. ಇದು ಲಾಟರಿ, ಜೂಜು ಯೂ ಚಕ್ರಬಂಧ ಸ್ಪರ್ಧೆಯಲ್ಲ. ಒಂದು ಫೌಂಟನ್ ಪೆನ್ನಿಗೂ ಅದರೊಡನೆ ಮುಖತ್ತು ಕೊಟ್ಟಲಾಗುವುದು ವಿವರಗಳಿಗೆ ಬರೆಯಿರಿ.

THE UNIVERSAL MUTUAL CORPORATION (K. M.)
P. O. Box No. 4013, BOMBAY—7.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಜೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆನಿಟಿ, ವಾರ್ಡಸ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯು ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಕಾ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ಮೆನೇಜ್.

ಯಂತ್ರಗಳಿಗಿಂತ ಎತ್ತುಗಳು ಶ್ರೇಷ್ಠ.

ಲೇ: ವೈದ್ಯಗುರು ಎಂ. ಆರ್. ಭಟ್.

ದೇಶದ ಆರ್ಥಿಕ ವ್ಯವಸ್ಥೆಯು ನೂತನ ಯೋಜನೆಯು ಹೆಸರಿನಲ್ಲಿ, ಹೆಬ್ಬಿಡಿದ ವಿಚಾರಗಳ ಕಾರಣ, ಕೃಷಿಯು ವಿಧಗಳಲ್ಲಿ ಮತ್ತು ಯೋಜನೆಯ ವಿಧಿಗಳಲ್ಲಿ ಅಲ್ಲಿ ಯಂತ್ರಗಳಿಗೆ ಸ್ಥಾನ ಕೊಡಿಸುವ ಪರಿಸ್ಥಿತಿಯು ಎನ್ನು ಕಾಣಿಸುತ್ತದೆ. ಭೂತ ಯೋಜನೆಗಳ ಪರ್ಸ್ಪಾತಿಗಳ ಮಹೋ ಕಾಮನೆಯು ಸಫಲವಾದರೆ, ದೇಶದಲ್ಲಿ ಎತ್ತುಗಳ ಚಿಹ್ನೆಯೇ ಉಳಿಯಲಾರದು. ನಾವು ಒಂದಾವರ್ತಿ ಪುನಃ ಈ ಸಕಲೆಯ ಪಡುಗಳನ್ನು ಹೋಚಿಸುವುದು ಆತ್ಯಾವಶ್ಯಕ. ಎತ್ತಿನ ವಿಷಯದಲ್ಲಿ ಸಕಾಲದಲ್ಲಿ ವಿಚಾರ ಮಾಡುವುದೇ ಫಲಗಿಂದಲೂ ಕೋಚಿಸುವುದು.

ನಮ್ಮ ದೇಶದಲ್ಲಿ ಆದಷ್ಟು ಅಧಿಕ ಹಾಲು ಉತ್ಪನ್ನ ಮಾಡುವುದು ಅವಶ್ಯಕ ಎಂಬ ವಿಷಯವು ಹೊದಲನೇಯದು. ಅದುದರಿಂದ ಫಲಗೆ ದನಗಳ ಅವಶ್ಯಕತೆಯು ಇರುವುದು ನಿಜ; ದನಗಳಿರುವಾಗ ಅವುಗಳೊಡನೆ (ಎತ್ತು) ಹೋರಿಗಳು ಕೂಡಾ ಇರಬೇಕು. ಎತ್ತುಗಳಿಗೆ ಪೂರ್ಣ ಕೆಲಸದ ಅವಶ್ಯಕತೆಯೂ ಇರುವುದು. ಹಾವು ಹೊಲದಲ್ಲಿ ಫೇಗಿಲಿನೊಡನೆ ಜೋಡಿಸಿ ಅವುಗಳನ್ನು ಕೃಷಿಗೆ ಉಪಯೋಗಿಸುವುದರಿಂದ, ಸವಾರಿ ಮಾಡಲು ಎತ್ತುಗಳನ್ನು ಗಾಡಿಗೆ ಜೋಡಿಸುವದರಿಂದ ಮತ್ತು ಗಾಣ ನಡೆಸಲು ಎತ್ತುಗಳನ್ನು ಉಪಯೋಗಿಸುವುದರಿಂದ ಎತ್ತುಗಳಿಗೆ ಪೂರ್ಣ ಕೆಲಸವು ಲಭಿಸಬಲ್ಲುದು. ನಾವು ಈ ಸಕಲ ಉಪಾಯಗಳಿಂದ ಎತ್ತುಗಳ ಉಪಯೋಗ ಮಾಡಿದ್ದರೆ ಫಲ್ಮ ಅನಸ್ಥೆಯು ಪಾಶ್ಚಾತ್ಯ ದೇಶದಂತೆ ಆಗುವುದು. ಅಲ್ಲಿ ದನಗಳ ವಂಶವನ್ನು ವೃದ್ಧಿಗೊಳಿಸಲು ಅವಶ್ಯವಿದ್ದಷ್ಟು ಗಂಡು ಕರುಗಳನ್ನು ಮಾತ್ರ ಪರಿಪಾಲಿಸಿ ಸಲಹಿ, ಹೋರಿಗಳಾಗಿ ಮಾಡುತ್ತಾರೆ; ಉಳಿದವುಗಳೆಲ್ಲಾ ವಧಿಸಲ್ಪಡುತ್ತವೆ.

ಯಂತ್ರಗಳು ಹೊಲಗಳನ್ನು ವಿಶಾಲ ಹರಹಾಗಿ ಕೂಡದಲ್ಲಿ ಹೊಳುತ್ತವೆ; ಹೊಲದಲ್ಲಿ ಉಳಲು ಉಪಯೋಗಿಸುವ 'ಟ್ರೇಕ್ಟರು' ಒಂದು ಯಂತ್ರವಾಗಿದೆ. ಎತ್ತಿನಲ್ಲಿ ಅದರ ಶಕ್ತಿಯಿರುವದಿಲ್ಲ ಅದು ಯಂತ್ರವೇ ಆಗಿದೆ. ಎತ್ತು ಒಂದು ಜೀವಿಸುವ ಹಾಗೂ ಜಾಗ್ರತೆಯ ಯಂತ್ರವೆಂದು ನೆನಪಿಸಲ್ಲಿಡಬೇಕು. ಅದು ಒಂದು ಪ್ರಾಣಿ, ಅದರಂತಹ ಸರಳ ಸಾಧು ಪಶುಗಳೊಡನೆ ಮನುಷ್ಯರ ಸಂಬಂಧವು ಮಾನವೀಯ ಸಭ್ಯತೆಯ ವಿಕಾಸದಲ್ಲಿ ಒಂದು ವಿಶೇಷ ಮಹತ್ವದ ವಸ್ತುವಾಗಿದೆ; ಈ ವಿಷಯವು ಪ್ರಮುಖವೂ ಆಗಿದೆ, ಪಶ್ಚಿಮ ಸಂಸ್ಕೃತಿಯ ವಿಶೇಷ ಚಿಹ್ನೆಯಲ್ಲಿ ಅನೇಕ ಒಡಕು ತೊಡಕುಗಳಿವೆ. ಅವುಗಳಲ್ಲಿ ಆಗಾಗ್ಗೆ ಸಂಭವಿಸುವ ರಕ್ತ ರಂಜಿತ ಯುದ್ಧವು ಒಂದಾಗಿದೆ. ಈ ಯುದ್ಧಗಳ ಮಧ್ಯದಲ್ಲಿ ಮನುಷ್ಯನು ತನ್ನ ಮಾನವತೆಯನ್ನು ಮರೆತು, ಪಶುವಾಗುತ್ತಾನೆಂಬುದನ್ನು ನೋಡುತ್ತಲಿದ್ದೇವೆ. ಪಶ್ಚಿಮ ಜಗತ್ತಿನ ಪಶುಗಳ ಶಕ್ತಿಯು ಉಪಯೋಗವನ್ನು ಬಿಟ್ಟು ಬಿಟ್ಟು ಅದರ ಬದಲಿಗೆ ಜಡ ಹಾಗೂ ಅಚೇತನ ಯಂತ್ರಗಳನ್ನು ಸ್ಥಾಪಿಸಿರುವರು. ಅವುಗಳೇ ಈ ಸಕಲ-ಕೆಡುಕು ಹಾಗೂ ಅವಗುಣಗಳ ಮೂಲವಾಗಿವೆ; ಇಹರಲ್ಲಿ ಆಶ್ಚರ್ಯವೇನು?

ಮಾನವತೆಯು ಭಾವನೆಯು ಮೇಲೆ ಉಪಸಾಹ ಹೂಡಿದ ಯುಕ್ತಿಯಿದು; ಅದಕ್ಕೆ ಇದಕ್ಕೆ ಆರ್ಥಿಕ ಯುಕ್ತಿಯ ಬೆಂಬಲ ಶೀಘ್ರ ಪುಷ್ಟೀಕರಿಸುವುದು ಅನಶ್ಯಕ. ಅದುದರಿಂದ ಈಗ ನಾವು ಆರ್ಥಿಕ ಯುಕ್ತಿಗಳ ವಿಷಯ ವಿಚಾರಿಸುವಾ. ಇದಕ್ಕೋಸ್ಕರ ನಾವು ಶ್ರೀವೂನ್ ಎನ್. ಜೆ. ಆಷ್ಬೆಯವರ 'ಥೋಟ್ಸ್ ಎಂಡ್ ವರ್ಕ್‌ಬೆಂಚ್ ವಿಲ್ಲೇಜಸ್' ಎಂಬ ಹೆಸರಿನ ಪುಸ್ತಕದ ಉಪಯೋಗವನ್ನು ಯಥೇಚ್ಛವಾಗಿ ಪಡೆದೇಕಾಗಿದೆ; ಸಮರ್ಥ ಭಾರತ ಯಂತ್ರಾಲಯದ ಶ್ರೀವೂನ್ ಸರದೇಸಾಯಿಯವರೂ ಪೂನೆಯಿಂದ ಪ್ರಕಾಶಿಸಿದ 'ಎಕೋನೋವಿಕ್ಸ್ ಆಫ್ ದ ಬುಲ್ಲಕ್' ಎಂಬ ಶೀರ್ಷಕ ಭಾಗದ ಉಪಯೋಗವನ್ನು ಯಥೇಚ್ಛವಾಗಿ ಮಾಡಬೇಕು.

ಎತ್ತು ಕೇವಲ ಚೇತನ ಟ್ರೇಕ್ಟರ ಮಾತ್ರವಲ್ಲ; ಅದು ಗೊಬ್ಬರದ ಒಂದು ಜೀವಂತ ಹಾಗೂ ಕಾರ್ಖಕಾರೀ ಕಾರ್ಖಾನೆಯೂ ಆಗಿದೆ. ಅದು ಫಲಗೆ ಗೋಷ್ಠದಿಂದ ಸಿಕ್ಕುವ ಅವಮೂಲ್ಯ ಗೊಬ್ಬರ ಕೊಡುತ್ತದೆ. ಆ ಗೊಬ್ಬರವು ಪೃಥ್ವಿಗೆ 'ನೈಟ್ರೋಜನ್' ಎಂಬ ಪದಾರ್ಥ ಕೊಡುತ್ತದೆ ಅದರಿಂದ ಭೂಮಿಯು ಮತ್ತು ಕಣಗಳ ಮಧ್ಯದಲ್ಲಿ ಸ್ವಲ್ಪ ಅಂತರವಿರುತ್ತದೆ. ಮತ್ತು ನೀರನ್ನು ಹಿಡಿದಿರಿಸುವ ಭೂಮಿಯ ಶಕ್ತಿಯು ಹೆಚ್ಚಾಗುತದೆ. ಅದರ ಕಾರಣ ಭೂಮಿಯಲ್ಲಿ ನೀರಿನ ಪಸೆ ಮತ್ತು ಪ್ರಾಯು ಇವೆರಡೂ ಪ್ರಚುರ ಪ್ರಮಾಣದಲ್ಲಿ ಶಯೂರಾಗುತ್ತಲಿವೆ ವನಸ್ಪತಿಯು ಪೋಷಣ ಮತ್ತು ಅದರ ಬೆಳವಣಿಗೆಗೆ ಈ ಮೂರು ವಸ್ತುಗಳೂ ಅತ್ಯಾವಶ್ಯಕವಾಗಿವೆ. ಭೂಮಿಯನ್ನು ಉತ್ಕೃಷ್ಟವಾಗಿಡಲು ಇಚ್ಛಿಸುವವರು ಭಿನ್ನ ಭಿನ್ನ ತತ್ವಗಳನ್ನು ಒಟ್ಟುಗೂಡಿಸಿ ಅದರ ತೀಕ್ಷ್ಣ ಗೊಬ್ಬರವನ್ನು ರಚಿಸಬೇಕು. ಮತ್ತು ಭೂಮಿಯಲ್ಲಿ ಯಥೇಚ್ಛ ಹಾಕಿದರೂ ಅಥವಾ ಹೆಚ್ಚು ಹಾಕಿದರೂ ಅದರಿಂದ ಹಾನಿಯು ಸಂಭವಿಸದು; ಅದರಿಂದ ಪ್ರಾಯು ಮತ್ತು ಜಲವನ್ನು ಹೀರುವ ಅದರ ಶಕ್ತಿಯು ಹೆಚ್ಚಾಗಿ ಆ ಗೊಬ್ಬರದಿಂದ ಹೆಚ್ಚು ಲಾಭವು ಪರಿಣಮಿಸುವುದು.

ಕೃತ್ರಿಮ ಗೊಬ್ಬರವು ಶಾಪರೂಪವಾಗಿದೆ. ಅದಲ್ಲದೆ ಸಣಬಿನಂತಹ ಎರಡು ಕಳ್ಳೆಗಳ ಜಾತಿಯ ಗಿಡಗಳು ಸ್ವಲ್ಪ ಬೆಳೆದೊಡನೆ, ಅವುಗಳನ್ನು ನವೀನ ಭೂಮಿಯಲ್ಲಿ ನೆಟ್ಟು ತಾ ಜಾ ಗೊಬ್ಬರವನ್ನು ಹಾಕುವ ಸಂಪ್ರದಾಯವು ನಮ್ಮಲ್ಲಿ ಪ್ರಚಲಿತವಾಗಿದೆ; ಅದರಿಂದ ಎಲ್ಲವನ್ನೂ ಪರೀಕ್ಷಿಸಿದ ನಂತರ ಗೋಷ್ಠದಿಂದ ಲಭಿಸುವ ಗೊಬ್ಬರದ ಸಮಾನ ಕೃತ್ರಿಮ ಗೊಬ್ಬರವು ನೀಚ ಜಾತಿದ್ದಾಗಿದೆ. ಇದರ ಒಂದು ಕಾರಣವೇನೆಂದರೆ, ಬೀಜ ಬಿತ್ತುವ ಸಮಯದಿಂದ ಪ್ರಾರಂಭಿಸಿ, ಕತ್ತರಿಸಿದ ಸಸಿಗಳನ್ನು ಭೂಮಿಯಲ್ಲಿ ಹುಗಿದಿಟ್ಟು, ಅವುಗಳು ಕೊಳೆಯುವ ತನಕ ಭೂಮಿಯು ಖಾಲಿ ಬೀಳುತ್ತದೆ. ಅದರ ಎರಡನೆಯು ಉಪಯೋಗವಾಗದು. ಈ ಹಸುರು ಎಲೆಗಳು ಪಶುಗಳಿಗೆ ತಿನ್ನಿಸುವ ಕೆಲಸಕ್ಕೆ ಕೂಡ ಬರುವುದಿಲ್ಲ. ಇದಕ್ಕೆ ವಿಪರೀತವಾಗಿ, ಎತ್ತುಗಳು ಹನ್ನೆರಡು ತಿಂಗಳು ಕೆಲಸಮಾಡುತ್ತವೆ: ಸ್ವಯಂ ಹುಲ್ಲು ಮುಂತಾದವುಗಳನ್ನು ಮೇದು, ಅದನ್ನು ಸಗಣಿಯ ರೂಪದಲ್ಲಿ ಪುನಃ ನಮಗೆ ನೀಡುತ್ತದೆ. ಸಗಣಿಯು ಗೊಬ್ಬರವು ಭೂಮಿಯಲ್ಲಿ ಸರಳತೆಯಿಂದ ಮೆತ್ತಗಾಗಿ ಸೇರುತ್ತದೆ. ಭೋಜನದಂತೆ, ತಿಂಡ ವಸ್ತುಗಳನ್ನು ರೂಪಾಂತರಿಸುವ ಕೆಲಸವು ಪ್ರಾಣಿಯು ದೇಹದೊಳಗೆ ಆಗುತ್ತಲಿರುತ್ತದೆ; ಆ ಕಾರಣದಿಂದ, ಅದರಲ್ಲಿ ನಾಯಟ್ರೋಜನ್ ಅಧಿಕ ಪ್ರಮಾಣ ಪ್ರಮಾಣದಲ್ಲಿ ಉತ್ಪನ್ನವಾಗುತ್ತದೆ.

ಹುಲ್ಲಿನ ಮೂಲಾಂತರ, ಎತ್ತು ತನ್ನ ಹೊಟ್ಟೆಯಲ್ಲಿ ಹಾಕಿದ ನಾಯಟ್ರೋಜನಿನ ಸತ್ವವು ನನಗೆ ಅದರ ಸಗಣಿಯಿಂದ ಪುನಃ ಲಭಿಸುತ್ತದೆ; ಯಾಕೆಂದರೆ, ಕೆಲಸ ಮಾಡುತ್ತಿರುವ ಎತ್ತಿನ ಶರೀರದಲ್ಲಿ ಕೇವಲ ಪಿಷ್ಟಶರ್ಕರಾದಿ ವಸ್ತುಗಳ ಉಪಯೋಗವೇ ಆಗುತ್ತದೆ. ಗೊಬ್ಬರದ ರೂಪದಲ್ಲಿ ಈ ಕಾರ್ಬೋ ಹ್ಯಾಡ್ರೇಟುಗಳು ಅಧಿಕ ಕೆಲಸ ಮಾಡುವುದಿಲ್ಲ; ಯಾಕೆಂದರೆ, ಹೂಳಿದ ನಂತರ ಚೆಗುರಿಸಿದ ಹೊಲಕ್ಕೆ ಅವಶ್ಯವಿರುವಷ್ಟು, ಕಾರ್ಬೋ ಹ್ಯಾಡ್ರೇಟಷ್ಟು ಬೆಳೆಯುತ್ತಿರುವ ಗಿಡಗಳು ವಾಯುವಿನಿಂದ ಗ್ರಹಣಮಾಡುತ್ತವೆ; ಭೂಮಿಯೊಳಗಿನಿಂದ ಹೀರಿ ತೆಗೆದುಕೊಳ್ಳುವ ಅವಶ್ಯಕತೆಯು ಅವುಗಳಿಗೆ ಬೀಳುವುದಿಲ್ಲ. ಹೆಸರು ಗಿಡಗಳನ್ನು ಭೂಮಿಯೊಳಗಿ ಹುಗಿದಿಡುವುದರಿಂದ, ವ್ಯರ್ಥವಾಗುವ ಶಕ್ತಿಯನ್ನು ಎತ್ತು ತನ್ನ ದೇಹದಿಂದ ಅವನ್ನು ಪೂರ್ಣವಾಗಿ ಪೂರೈಸುತ್ತದೆ. ಇದರ ಅರ್ಥ, ಗೋಷ್ಠದಿಂದ ಲಭಿಸುವ ಸಗಣಿ ಮುಂತಾದವುಗಳ ಕಾರಣ್ಣ ಹಸಿರಂ ಗೊಬ್ಬರಕ್ಕಿಂತ ಭೂಮಿಗೆ ಅಧಿಕ ಭೋಜನ ಮಾಡಿಸುತ್ತದೆ; ಯಾಕೆಂದರೆ, ಪ್ರಾಣಿಯು ಶರೀರದೊಳಗಿನಿಂದ ಚಲಿಸಿಬರುವಾಗ, ಹುಲ್ಲಾ ಮೇವುಗಳ ರೂಪದಲ್ಲಿ, ತನ್ನ ಶರೀರದೊಳಗೆ ಮುಟ್ಟಿಸುವ ವಸ್ತುಗಳನ್ನೆಲ್ಲಾ ಅದು ತನ್ನ ಶರೀರದ ರಸದಿಂದ ಪಚನಮಾಡಿ ಪ್ರತ್ಯೇಕ ಪ್ರತ್ಯೇಕವಾಗಿ ವಿಭಜಿಸಿ, ಸಿದ್ಧಪಡಿಸಿ, ಸೆಗಣಿಯ ರೂಪದಲ್ಲಿ ಹಾಗೂ ಗೊಬ್ಬರದ ರೂಪದಲ್ಲಿ ಭೂಮಿಗೆ ನೀಡುತ್ತದೆ.

ಯಂತ್ರಗಳಿಗಿಂತ ಎತ್ತು ಶ್ರೀಷ್ಠವಾಗಿದೆ; ಹೊಲವನ್ನು ತಾಜಾ ಆಗಿಡಲು, ಉತ್ಕೃಷ್ಟ ಗೊಬ್ಬರ ಕೊಡುತ್ತದೆ; ಮಾತ್ರವಲ್ಲ, ಎತ್ತು ಹಲವು ಪ್ರಕಾರದ ಕೆಲಸ ಮಾಡುತ್ತದೆ; ಆ ಸಮಸ್ತ ಕಾರ್ಯಗಳನ್ನು ಮಾಡುವ ಒಂದು ಯಂತ್ರವನ್ನು ರಚಿಸುವುದು ಅಸಂಭವವೇ ಸರಿ; ಇದನ್ನು ನಾವು ತಿಳಿದಿರಬೇಕು. ಎತ್ತು ವೇಗದಿಂದಲೂ ಕೆಲಸ ಮಾಡಬಲ್ಲುದು; ಮೆಲ್ಲ ಮೆಲ್ಲಗೂ ಮಾಡುವುದು. ಅದು ಕೇವಲ ನೇಗಿಲಿನ ಸಹಾಯದಿಂದ ಹೊಲವನ್ನು ಹೂಳುವ ಕೆಲಸವನ್ನು ಮಾತ್ರ ಮಾಡುವಲ್ಲ; ಅದು ಭಾರವನ್ನು ಹೊರುತ್ತದೆ; ಧಾನ್ಯದ ಕಾಳುಗಳನ್ನು ಬಿಂಗಡಿಸುವ ಕಾರ್ಯದಲ್ಲಿಯೂ ಸಹಾಯವಾಗುತ್ತದೆ; ಇದೇ ಪ್ರಕಾರ ಶಯೂರಿಸಿದ ಧಾನ್ಯವನ್ನು ಜಾಗಕ್ಕೆ ಕೊಂಡೊಯ್ಯಲು, ಗಾಡಿಗೆ ಜೋಡಿಸಲ್ಪಡುತ್ತದೆ; ಈ ಸಕಲ ಕಾರ್ಯಗಳೊಡನೆ ಅದು ಬರಿದಾದ ಹೊಟ್ಟೆಯಲ್ಲಿ, ಒಣ ಹುಲ್ಲು ಮುಂತಾದ ವಸ್ತುಗಳನ್ನು ತಿನ್ನುತ್ತದೆ; ಅವುಗಳಿಂದ ಮನುಷ್ಯನು ತನ್ನ ಆಹಾರದ ಧಾನ್ಯ, ಅಕ್ಕಿ ಮತ್ತು ಕೈಲವನ್ನು ಸಿದ್ಧಪಡಿಸುತ್ತಾನೆ. ಒಂದು ಜೋಡು ಎತ್ತಿನ ಕ್ರಯವು ಸುಮಾರು ೨೦೦-೩೦೦ ರೂಪಾಯಿ ಆಗಬಹುದು. ಎತ್ತು ಮಾಡುವ ಸಕಲ ಕಾರ್ಯಗಳನ್ನು ಯಂತ್ರಗಳಿಂದ ಮಾಡುವುದಾದರೆ, ಕೃಷಿಕರಿಗೆ ಕಡಮೆಯೆಂದರೆ ಕಡಿಮೆ ಒಯ್ಲ ಇಂಜಿನ್, ಒಂದು ಮೋಟಾರ್ ಲೋರಿ, ಒಂದು ಟ್ರೇಕ್ಟರ್, ಮೋಟಾರಿಗೆ ಬೇಕಾಗುವ ಸಣ್ಣ ಸಣ್ಣ ಚಕ್ರಗಳು, ಮುಂತಾದ ಇನ್ನೂ ಅನೇಕ ವಸ್ತುಗಳು ಬೇಕಾಗಿವೆ. ಇವುಗಳೆಲ್ಲವುಗಳ ಕ್ರಯವು ಎತ್ತಿನ ಕ್ರಯಕ್ಕಿಂತ ಬಹು ಅಧಿಕವಾಗಿದೆ. ಆದರ ಆರಿಕ್ಷ, ಯಂತ್ರಗಳನ್ನು ನಡಿಸಲು; ಕಟ್ಟಿಗೆ ಬದಲಿಗೆ, ಕ್ರೂಡ್‌ಓಯ್ಲ ಅಥವಾ ಪೆಟ್ರೋಲನ್ನು ಕೃಷಿಕರು ಖರೀದಿ ಮಾಡಬೇಕಾಗಿದೆ. ಈ ಕ್ರೂಡ್‌ಓಯ್ಲ ಅಥವಾ ಪೆಟ್ರೋಲು ದೇಶದಲ್ಲಿ ಇಂದು ಉತ್ಪನ್ನವಾಗುವುದೂ ಇಲ್ಲ; ದೇಶದಲ್ಲಿ ಯಥೇಷ್ಟ ಲಭಿಸುವುದೂ ಕಷ್ಟವಾಗಿದೆ; ಇದು ಕೂಡ ಒಂದು ವಿಚಾರಿಸಬೇಕಾದ ವಿಷಯವಾಗಿದೆ.

ಹೊಲದಲ್ಲಿ ವಿಶೇಷವಾಗಿ ನೇಗಿಲು ತಿರುಗಿಸುವುದು; ಮಣ್ಣನ್ನು ಮೇಲೆ ಕೆಳಗೆ ಮಾಡುವುದು, ಬೇಜ ಬಿತ್ತುವುದು, ಮಣ್ಣು ಕಾದ ಕೆಲಸಗಳು ಇರುತ್ತವೆ. ಈ ಸಮಸ್ತ ಕೆಲಸಗಳ ಕಾರಣದಿಂದ ಎತ್ತಿಗೆ ಒಂದು ವರ್ಷದಲ್ಲಿ ಮೂರು ನಾಲ್ಕು ತಿಂಗಳ ಪೂರ್ಣ ಕೆಲಸವು ಲಭಿಸುತ್ತದೆ. ಉಳಿದ ಸಮಯದಲ್ಲಿ ಅದರ ಉಪಯೋಗವು ಸಾಮಾನು ಒಯ್ಯುವುದರಲ್ಲಿ, ಜನರನ್ನು ಒಂದು ಸ್ಥಾನದಿಂದ ಇನ್ನೊಂದು ಸ್ಥಾನಕ್ಕೆ ಕೊಂಡು ಹೋಗುವುದರಲ್ಲಿ, ಮತ್ತು ಶೈಲ ಮುಂತಾದವುಗಳನ್ನು ಒತ್ತಿ ಮಾಡುವುದರಲ್ಲಿ, ಮಾಡಲ್ಪಡುತ್ತದೆ; ಆದರೆ, ಯಂತ್ರಗಳು ತಮ್ಮ ಕೆಲಸವನ್ನೇ ಮಾಡಬಲ್ಲವು; ಹೊಲದ (ಕೃಷಿಯ) ಕೆಲಸವು ಮುಗಿದ ನಂತರ, ಬಹು ದೀರ್ಘಕಾಲ ಕೆಲಸವಿಲ್ಲದೆ ಇರಬೇಕಾದೀತು.

ಯಂತ್ರಗಳಿಂದ ಶೈಲ ತಯಾರಿಸುವುದರಿಂದ ಮೇಲಿಂದ ಮೇಲೆ ಲಾಭವು ದೃಷ್ಟಿಗೋಚರವಾಗುತ್ತದೆ; ಯಾಕೆಂದರೆ ಕೆಲಸವಿಲ್ಲದೆ, ಖಾಲಿಬೀಳುವ ಯಂತ್ರಗಳಿಂದ ಕೃಷಿಕರು ಅನ್ಯ ಪ್ರಕಾರದ ಯಾವ ಉಪಯೋಗವನ್ನು ಮಾಡಲಾರರು.

ಶ್ರೀವೂನ್ ಆಷ್ಬೆಯವರ ಅಮೂಲ್ಯ ಮತ್ತು ಅಭ್ಯಾಸಪೂರ್ಣ ಸಂಪೂರ್ಣ ಗ್ರಂಥದಿಂದ ಈ ಕೆಳಗಿನ ವಿಷಯವನ್ನು ಉಲ್ಲೇಖಿಸಿ, ಲೇಖನವನ್ನು ಅಂತ್ಯಗೊಳಿಸುವೆನು—"ಮನುಷ್ಯ ಮತ್ತು ಪ್ರಾಣಿಗಳಲ್ಲಿರುವ ಸಮಸ್ತ ಶಕ್ತಿಯು ಪೂರ್ಣಲಾಭವನ್ನು ಪಡೆದ ನಂತರವೇ ಯಂತ್ರಗಳನ್ನು ನಾವು ಉಪಯೋಗಿಸಬೇಕು; ಅದುದರಿಂದ, ಯಂತ್ರವನ್ನು ಕೃಷಿಗೋಸ್ಕರ ಉಪಯೋಗಿಸುವ ಅವಶ್ಯಕತೆಯು ಇಂದು ಇರುವುದಿಲ್ಲ".

"ನವಯುಗ"

॥ ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಗೃಹಗಳ ಪಾತ್ರ. ॥

ಲೇ:—ಶ್ರೀ ಕೆ. ಬಿ. ಐಯ್ಯಪ್ಪ, ಬಿ. ಎ., ಬಿ. ಟಿ, ಸ್ಕಾಪೋಕ್ಲು ತಾಲೆ.

ಈಗಿನ ವಿದ್ಯಾಭ್ಯಾಸ ಕ್ರಮಗಳು, ನಮ್ಮ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ವೃದ್ಧಿಗೊಳಿಸುವುದರಲ್ಲಿ ಸ್ವಲ್ಪ ಮಾತ್ರ ಆನುಪಾಗಿವೆ. ಅದ್ದರಿಂದ ಅನೇಕ ಜಗದ್ವಿಖ್ಯಾತ ಮೇಧಾವಿಗಳು ನಮ್ಮ ಹುಕ್ಕಳನ್ನು (ರಾಷ್ಟ್ರದ ಶ್ರೇಷ್ಠ ಸಂಪತ್ತು) ನೂತನ ಶಿಕ್ಷಣ ಸಾಧನಗಳಿಂದ ಜೀವಿಸಲು ಯುಪಾರ್ಥವಾದ ಸ್ಫೂರ್ತಿದಾಯಕ ಶಕ್ತಿಯನ್ನು ಇವರಲ್ಲಿ ಉಗಮಿಸುವ ಸತತ ಪ್ರಯತ್ನದಲ್ಲಿದ್ದಾರೆ.

ಮೀ ಮಕ್ಕಳಲ್ಲಿ ಸರ್ವ ಗುಣ ಸಂಪನ್ನತೆಯು ಉಚಿತ ಹಾಗೂ ಭದ್ರವಾದ ತಳಹದಿಯಲ್ಲಿ ಪ್ರಾರಂಭವಾಗುವ ಪ್ರಥಮ ಮತ್ತು ಶ್ರೇಯಸ್ಕರವಾದ ನೆಲೆವೀಡು ಎಂದರೆ ಗೃಹ. ವಿದ್ಯಾಮೂರ್ತಿ, ಸಂಸ್ಥೆಗಳ ಸಂಸರ್ಗ ಹಾಗೂ ಇಡೀ ರಾಷ್ಟ್ರವೇ ಮಕ್ಕಳಿಗೆ ಶಿಕ್ಷಣ ತರಬೇತನ್ನು ನೀಡಿದರೂ ಅಡಿಯಲ್ಲಿ, ಅದರಲ್ಲೂ ಮಕ್ಕಳ ಪ್ರಾರಂಭ ಪಾಠ ಪಠನ ವೇಳೆಯಲ್ಲಿ ಮನೆಯೇ ಮಗುವಿನ ಗುಣಾವಗುಣಗಳನ್ನು ಶೋಧಿಸಿ ಮಾನಸಿಕ ಚಟುವಟಿಕೆಯನ್ನು ಪುನಘಟಿಸಿ ಅದರ ಮನೋಬಯಕೆಯನ್ನು ಪೂರೈಸುವುದು. ಮನೆಯಲ್ಲಿ ಅಧ್ಯನಿಕ ಶಿಕ್ಷಣವನ್ನು ಸಂಘಟಿಸಲು ಸಾಧ್ಯ

ನಮ್ಮ ಮನೆಗಳ, ನಮ್ಮ ಜನರ ಜೀವನದಲ್ಲಿ ಅನೇಕಾನೇಕ ಉತ್ತಮ ಹಾಗೂ ಚಿರಸ್ಥಾಯಿಯಾದ ಪರಿವರ್ತನೆಯನ್ನು ತಂದೊಡ್ಡಿದ ಕೊಟ್ಟಲುಗಳಾಗಿವೆ. ಅದ್ದರಿಂದ ಈಗಿನ ಶಿಕ್ಷಣ ಕ್ರಮಗಳು ಮನೆಗಳ ಸದ್ಭಾವನೆಗಳ ಹುಟ್ಟಿನ ವ್ಯವಸ್ಥಿತಗೊಳ್ಳಬೇಕು ಮಕ್ಕಳ ಸರ್ವತೋಮುಖವಾದ ಬೆಳವಣಿಗೆಯಲ್ಲಿ ಗೃಹಗಳ ಪಾತ್ರ ಅಮೂಲ್ಯವಾದದ್ದು. ಪ್ರತಿಯೊಂದು ಮನೆ ಈ ದಿವ್ಯ ಜವಾಬ್ದಾರಿಕೆಯನ್ನು ಅರಿತು ಮಕ್ಕಳನ್ನು ಪ್ರಗತಿಪೀಠಾರೋಹಣಗೊಳಿಸಿದರೆ ಅಲ್ಲಿದೆ ಉದಾತ್ತ ಧ್ಯೇಯ; ಅಲ್ಲಿದೆ ಭಾವೀ ಪೀಳಿಗೆಯ ಏಳಿಗೆ. ಅದ್ದರಿಂದಲೇ ಮನೆಗಳ ಏಕ ಮತ್ತು ಸ್ಫೂರ್ತಿದಾಯಕ ವಾತಾವರಣದ ಸಂಪರ್ಕವನ್ನು ಹೊಂದಿಕೊಂಡು ಈಗಿನ ಶಿಕ್ಷಣ ಭ್ಯಾಸವು ರೂಪಿತಗೊಳ್ಳಬೇಕು.

ಮಾನಸಿಕ ವಿಕಾಸಕ್ಕಾಗಿ, ಮನೆಯಲ್ಲಿ ವಿದ್ಯಾ ಸಹಾಯಕವಾಗುವ ನಿಯಮಗಳು ಅನೇಕ ಇವೆ.

ಮೂತಾಪಿತೃಗಳು ತಮ್ಮ ಮಕ್ಕಳಲ್ಲಿ ಶ್ರೇಷ್ಠ ಶೀಲತೆಯನ್ನೂ, ವಿಶಾಲ ಸದ್ಭಾವನೆಯನ್ನೂ ಕಲ್ಪಿಸಬೇಕು.

ಅವಶ್ಯಕ ಕಲಾಶಕ್ತಿಯನ್ನು ಉತ್ಪನ್ನ ಮಾಡುವ ಮೂಲ ಕೈಗಾರಿಕೆಯಲ್ಲಿ ಅಭಿರುಚಿಯನ್ನು ಉದ್ಭವಿಸಬಹುದು ಬಾಲಕಿಯರಲ್ಲಿ ಗೃಹ ವಿಜ್ಞಾನವನ್ನು ಪ್ರಜ್ವಲಿಸಬೇಕು.

ಮನೆಯ ವಂಶಾಂತರ ಸಮಾಜ ಸೇವಕರನ್ನಾಗಿ ಮಕ್ಕಳನ್ನು ತರಬೇತು ಮಾಡಬೇಕು.

ಮನೆಗೂ ರಾಷ್ಟ್ರಕ್ಕೂ ಅನ್ಯೋನ್ಯ ಜಟಿಲ ಸಹಕಾರ ತರುವದರಲ್ಲಿ ಕಾರ್ಯೋನ್ಮುಖರಾಗುವಂತೆ ಬೋಧಿಸಬೇಕು.

ಮಕ್ಕಳ ದಡ್ಡತನ ಬುದ್ಧಿಮಾಂದ್ಯತೆ, ಉದಾಸೀನತೆ ಮತ್ತು ಅಲ್ಲಲ್ಲಿ ತೋರುತ್ತಿರುವ ಬಾಲ್ಯ ಭ್ರಮೆ ಮತ್ತು ಹುಚ್ಚಾಟನವನ್ನು, ನಿವಾರಣೆ ಮತ್ತು ನಿರ್ಮೂಲನೆಯ ಯತ್ನಾಪಾರ್ಥವಾದ ವಾತಾವರಣದಲ್ಲಿ, ಜ್ಞಾನವಿಕಾಸವಾಗುವಂತೆ ಯತ್ನಿಸಬೇಕು.

ಇವುಗಳೆಲ್ಲರ ಪೈಕಿ, ಬೆಳೆಯುವ ಮಕ್ಕಳ ಸದ್ಗುಣಗಳನ್ನು ಶಾಶ್ವಿತ ಮಾಡುವುದು; ಮತ್ತು ವಿಶಾಲ ಮನೋಧರ್ಮಾಡ್ಯವನ್ನು ಕಲ್ಪಿಸುವುದು ಪ್ರಾಧಾನ್ಯವಾಗಿದೆ. 'ಉತ್ತಮ ಸ್ವಭಾವವೇ ಉತ್ತಮ ತೀಲದ ಕಚ್ಚಾ ಮೂಲ' ಎಂದೊಬ್ಬ ಪಂಡಿತನು ಸಾರಿದ್ದಾನೆ. ಅದ್ದರಿಂದ ಸನ್ಮಾರ್ಗ ಪಠನಕ್ಕೆ ಬಲಯುಕ್ತವಾದ ಅಡಿಪಾಯವನ್ನು ಹಾಸುವ ಸ್ಥಳವೆಂದರೆ ಮನೆ. ಉತ್ತಮ ಮನೆಯೂ ಉತ್ತಮ ವ್ಯಕ್ತಿಗಳನ್ನು ಪಡೆಯುವದರಲ್ಲಿ ಸಂಶಯವಿಲ್ಲ. ಈ ಕೆಳಗಿನ ಚುಟುಕು ಉದಾಹರಣೆಗಳು ಮೇಲಿನ ಮಾತನ್ನು ಪುಷ್ಟೀಕರಿಸಬಹುದು.

ಶಿವಾಜಿಯ ತಾಯಿ ಜಿಜಾಬಾಯಿ ಮತ್ತು ಕುಲಗುರು ರಾಮದಾಸರು ಶಿವಾಜಿಯನ್ನು ಹೆಬ್ಬುಲಿಯಂತಹ ಧೈರ್ಯಶಾಲಿಯಾಗಿಯೂ, ಸಿಂಹಬಲವುಳ್ಳ ವ್ಯಕ್ತಿಯಾಗಿಯೂ ಮಾಡಲಿಲ್ಲವೇ? ಅದರಂತೆ ಮತ್ತು ನೂರ್ಗದರ್ಶಕ ಮೂತಾಪಿತೃಗಳಿಂದ ರಂಗೂರರವರು ಜಗದ್ವಿಖ್ಯಾತ ಕವಿಯಾಗಲಿಲ್ಲವೇ? ಮೆಸಿಡನ್ ರಾಷ್ಟ್ರದ ಫಿಲಿಪನು ತನ್ನ ಮೊಮ್ಮಗನಾದ ಅಲೆಗ್ಸಾಂಡರನ ವಿಷಯ ಅರಿಸ್ಟಾಟಲನಿಗೆ ಈ ರೀತಿ ಬರೆದಿರುತ್ತಾನೆ. 'ಅವನು ನಿಜವಾಗಿಯೂ ನಮ್ಮ ವಂಶಕ್ಕೆ ಪ್ರಚಂಡ ಕೀರ್ತಿಯನ್ನು ತರುವುದರಲ್ಲಿ ಸಂದೇಹವಿಲ್ಲ.'

ಆರೋಗ್ಯ ನಿಯಮಗಳು, ವಿಧೇಯತ್ವ, ಮೂತಾಪಿತೃಗಳ ಗುರುಹಿರಿಯರ ಮೇಲೆ ವಿಶ್ವಾಸಪೂರ್ವಕವಾದ ಆದರ ಮತ್ತು ವಿಶಾಲ ದೃಷ್ಟಿ—ಇವೇ ಮೊದಲಾದ ಗಣನಾತೀತ ಸದ್ಗುಣಗಳು ಮನೆಯಲ್ಲಿ ಮೊಳೆಯಬೇಕು. ನಾನಾ ರೀತಿಯ ಚಿನ್ನವಿಚಿನ್ನ ತತ್ವ ಸಂಗ್ರಹ, ಮಕ್ಕಳ ಮನಸ್ಸಿಗೆ ಹೊಕ್ಕಿದರೆ ಮಾನಸಿಕ ಅಭಿವೃದ್ಧಿ ಇಳಿಮುಖವಾಗುವದಲ್ಲದೆ ಜೀವನದಲ್ಲಿ ಸಹಿಷ್ಣುತೆ ಕನಿಷ್ಠವಾಗುವುದು.

ಈಗೀಗ ಬಾಧ್ಧಿ ಭ್ರಮೆಗೊಂಡಿರುವ ಮತ್ತು ಅರೆ ಹುಚ್ಚಿನ ಮಕ್ಕಳನ್ನು ನೋಡುತ್ತಿದ್ದೇವೆ. ನಮ್ಮ ಕೊಡಗು ದೇಶದಲ್ಲಿ ಸಹ ಈ ನಿದರ್ಶನಗಳು ತೋರಿ ಬರುವುದು ಬಹಳ ವ್ಯಸನಾತ್ಮಕವಾಗಿವೆ ಹಲವು ಅಸಮರ್ಥಾನಕರ ಮತ್ತು ಅಸಂತೋಷ ಸನ್ನಿವೇಶಗಳು ಮನೆಯ ಸೌಮ್ಯ ಶಾಂತ ಜೀವನವನ್ನು ಕೆಡಿಸುವದರಿಂದ ಈ ರೀತಿಯ ದುಃಖ ಚಿಹ್ನೆಗಳು ಪಠ್ಯ ಬಾಲಕರಲ್ಲಿ ಹೊರಸೂಸುತ್ತಿವೆ ಉತ್ತಮ ವ್ಯಕ್ತಿಗಳನ್ನಾಗಿ ತಮ್ಮ ಮಕ್ಕಳನ್ನು ರೂಪಿಸಬೇಕೆಂಬ ಹಂಬಲ ಮೂತಾಪಿತೃಗಳಲ್ಲಿ ಇದ್ದರೆ ಈ ರೀತಿಯ ಶೋಚನೀಯ ಘಟನೆ ಎಂದೂ ಸಂಭವಿಸಲಾರದು. ಈಗಿನ ತರಗತಿಗಳಲ್ಲಿ ಮಕ್ಕಳು ವಿಂಡಿವಿಂಡಿ ಇರುವುದರಿಂದ ಅಧ್ಯಾಪಕರಿಗೆ ಪ್ರತಿಯೊಂದು ವಿದ್ಯಾರ್ಥಿಯ ವ್ಯಕ್ತಿದೋಷಗಳನ್ನು ವಿಷದವಾಗಿ ಅರಿಯಲು ಸಾಕಷ್ಟು ಆಸ್ಪದ ಮತ್ತು ವಿರಾಮ ಸಿಗುವುದಿಲ್ಲ. ಅಲ್ಪ ಪ್ರಮಾಣದ ಕಳ್ಳತನ ಅಜ್ಞೆಗಳ, ನಿರಾಕರಣೆ ಮತ್ತು ದೈನಂದಿನ ಕರ್ತವ್ಯಗಳಲ್ಲಿ ಜಿಗುಪ್ಸೆ, ಬುದ್ಧಿಮಾಂದ್ಯ ಮಕ್ಕಳಲ್ಲಿ ತಲೆದೋರುತ್ತಿರುವುದನ್ನು ತಂದೆತಾಯಿಗಳ ಕರುಣಾಮಯ ಸ್ವಭಾವವು ನಿವಾರಣೆ ಮಾಡಬಹುದು. ಈ ರೀತಿಯ ಪವಿತ್ರ ಕಾರ್ಯದಲ್ಲಿ ಮೂತಾಪಿತೃಗಳು ನಿರತರಾದರೆ ಶಾಲಾ ಮೂತೆಯ ಪಾದಸೇವೆ ಮಾಡಿದಂತಾಗಿ ಮಹತ್ತಾದ ಸಹಾಯ ಸೇವೆ ಮಾಡಿದಂತಾಗುವುದು.

ಮನೆಯಲ್ಲಿ ಮಕ್ಕಳಿಗೆ ತಮ್ಮ ಕಲಾ ವೃತ್ತಿಗಳನ್ನಾಗಲೀ ತಾವು ತಿಳಿದಿರುವ ಕೈಗಾರಿಕೆಯನ್ನಾಗಲೀ ಕೌಶಲ ವಿದ್ಯೆಯೋಪಾದಿಯಲ್ಲಿ ಮಕ್ಕಳಿಗೆ ಅಭ್ಯಾಸಿಸಬೇಕು. ವಿರಾಮ ವೇಳೆಯಲ್ಲಿ ಹೀಗೆ ಮಾಡಿದರೆ ಬಾಲಕರ ಎಳೇ ಮನಸ್ಸಿನಲ್ಲಿ ಉತ್ಪಾದನಾ ಶಕ್ತಿ ಪ್ರಜ್ವಲಿತವಾಗುವುದು ಒಂದು ಮಗು ಸಂಗೀತದಲ್ಲಿ ಆಸಕ್ತಿ ತೋರಿಸಬಹುದು. ಮತ್ತೊಂದು ಏನಾದರೊಂದು ಗುಡಿ ಕೈಗಾರಿಕೆಯಲ್ಲಿ ಅಭಿರುಚಿಯನ್ನು ಸೂಚಿಸಬಹುದು. ಈ ರೀತಿಯ ಸ್ವಾಭಾವಿಕ ಮನಃಸ್ವಭಾವವನ್ನು ಆದಷ್ಟು ಮಟ್ಟಿಗೆ ಶ್ರೇಷ್ಠ ರೀತಿಯಲ್ಲಿ ಅಭಿವೃದ್ಧಿಯಾಗುವಂತೆ ಮಾಡಬೇಕು. ಅದರಿ ಹಲವು ಪೋಷಕರು, ಈ ರೀತಿಯ ಸಕ್ಕಾಂಪ್ಸೆಗಳನ್ನೆಲ್ಲಾ ನಿಗ್ರಹಿಸಿ ಬರೀ ಪುಸ್ತಕಗಳತ್ತ ಸೆಳೆಯುವುದು ತಪ್ಪು ನಡಲುವುದು, ಬಡಗಿ ಕೆಲಸ, ಬೆತ್ತದ ಕೆಲಸ, ಕುಕ್ಕೆಗಳ ತಯಾರಿಕೆ ಈ ಕೆಲವು ಸಾಮಾನ್ಯ ಗುಡಿ ಕೈಗಾರಿಕೆಗಳನ್ನು ಮಕ್ಕಳಿಗೆ ಕಲಿಸಬೇಕು. ನಮ್ಮ ಕೊಡಗಿನಲ್ಲಿ ಇದರ ಸಾಧ್ಯತೆ ತುಂಬಾ ಇದೆ. ಇದರಿಂದ ಮಕ್ಕಳ ಘನತೆ ಕಡಿಮೆಯಾಗಲಿಕ್ಕಿಲ್ಲ. ಬದಲು ಕುಟುಂಬ ಜೀವನ ಸುಗಮವಾಗುವುದು. ನಮ್ಮ ಈಗಿನ ಕಾಂಗ್ರೆಸ್ ಸರಕಾರದ ವೃತ್ತಿ ಶಿಕ್ಷಣ ಧೋರಣೆಯನ್ನು ನಾವೇ ಮನೆಯಲ್ಲಿ ಪ್ರಾರಂಭಿಸಬೇಕು. ಮಕ್ಕಳಲ್ಲಿ ಹೊರಹೊಮ್ಮುವ ವೃತ್ತಿ ಕಲಾ ಶಕ್ತಿಯನ್ನು ತಡೆಗಟ್ಟಿದರೆ ಆ ಶಕ್ತಿಯು ವಿವಿಧ ದುರ್ಮಾರ್ಗದಲ್ಲಿ ಪ್ರವಹಿಸಿ ತನ್ನ ನಾಶವಾಗಬಹುದು.

ಬಾಲಕಿಯರಿಗೆ ಮೂತಿಯರು ಗೃಹ ವಿಜ್ಞಾನವನ್ನು ಕಲಿಸಬೇಕಾಗಿದೆ. ಸ್ತ್ರೀಯರ ಜೀವನದಲ್ಲಿ ಮನೆಯ ಸಾಮ್ಯವ ಸ್ಥಿತ ಜ್ಞಾನ ಅವಶ್ಯಕವಾಗಿದೆ. ಸೇವಾ ದೃಷ್ಟಿ ಮಕ್ಕಳಲ್ಲಿ ನೆಲೆಸುವಂತೆ ಸಾಕಿಯ ಈ ಹುರಿಸಬೇಕಾಗಿದೆ. ಮನೆಯ ಬಾಹ್ಯ ಜೀವನವು ಬರೀ ಸಾಮಾನ್ಯ ಮತ್ತು ಸ್ವಚ್ಛ ಸಮೋಜ ಸಮಾನತೆಯಾದ್ದರಿಂದ ಸಾರ್ವಜನಿಕ ಸೇವಾದೃಷ್ಟಿ ಮಕ್ಕಳಲ್ಲಿ ಅತೀ ತೀಕ್ಷ್ಣವಾಗಿರಬೇಕು. ಕೋಮು ವಾರು ಭಾವನೆ, ಪಕ್ಷ ಧೋರಣೆ, ಉದ್ಭವವಾಗದ ಹಾಗೂ ಮತ್ತು ಇಡೀ ಮಾನವ ಕೋಟಿಯ ಸೇವಾ ತತ್ಪರತೆ ಇರುವ ಮನೋಭಿಲಾಷೆ ಉಳ್ಳವರಾಗಿ ಮಕ್ಕಳ ತರಬೇತು ಮಾಡಬೇಕು.

ಪೇಲು, ಕೀಳು, ಉತ್ತಮ, ಅಧಮ ರೆಂಬ ದುರಭಿಪ್ರಾಯಗಳು ಮೂಢಪಂತೆ ಸರ್ವ ಮನೆಗಳು ಗ್ರಹಿಸಬೇಕು. ಈ ಅನರ್ಥ ಭಾವನೆ ಶೀಲಾ ಮಕ್ಕಳ ಒಮ್ಮತದಲ್ಲಿಯೂ, ಐಕ್ಯತೆಯಲ್ಲಿ ದೊಡ್ಡ ತೊಡಕಾಗಿ ಪರಿಣಮಿಸಿದೆ. ಸಹೋದರತೆ, ಸಹೋದರ ಭಾವ, ಅತ್ಮಸಾಕ್ಷಿಯಾಗಿ ಮೊಳೆಯುವಂತೆ ಮನೆಗಳಲ್ಲಿ ಜೋಧನೆಯಾಗಬೇಕು. ಅಧಿಕ ಲಾಭದ ಆಲಸೆ, ಜೂಜಾಟ್ಟುಕೊಳ್ಳುವಿಕೆ, ಪರರನ್ನು ಸುಲಿಗೆ ಮಾಡುವಿಕೆ—ಇವೇ ಮೊದಲಾದ ಜೀವನದ ದುಷ್ಕೃತ್ಯಗಳ ವಿಫಲವನ್ನು ಅರಿಯಬೇಕು. ಈ ದುರಭಿಪ್ರಾಯಗಳು, ಪರರ ನಿಜವಾದ ಹಕ್ಕು ಬಾಧ್ಯತೆಗಳ ಅರ್ಹತೆಗೆ ಅಡಚಣೆಯೆಂದು ತಿಳಿಸಬೇಕು.

ಸರ್ವರೂ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬೇಕು. ಇಲ್ಲದಿದ್ದಲ್ಲಿ ರಾಷ್ಟ್ರಕ್ಕೆ ಕೇಡು ಬಯಸಿದಂತಾಗುವುದು. ತಂದೆ ತಾಯಿಗಳು ತಮ್ಮ ಮಕ್ಕಳ ಮೇಲಿರುವ ಜವಾಬ್ದಾರಿಕೆಯನ್ನು ತಿಳಿದು ಕರ್ತವ್ಯವಾಗಿ, ಶಾಲೆಗೆ ಕಳುಹಿಸಿದರೆ ಸರಕಾರದ ಈಗಿನ ಸಾರ್ವಜನಿಕ ವಿದ್ಯಾ ಯೋಜನೆಯಲ್ಲಿ ಸಹಕರಿಸಿದಂತಾಗುವುದು.

ಪ್ರೌಢ ಮತದಾನವನ್ನೊಳಗೊಂಡ ನಮ್ಮ ಸಾರ್ವಭೌಮತ್ವ ಪ್ರಜಾರಾಜ್ಯದ ನೂತನ ರಾಜ್ಯನಿಬಂಧನೆಯಲ್ಲಿ ಸರ್ವರಿಗೂ ಆಸ್ಪದಗಳು ಇರುವದರಿಂದ ಸರಕಾರದ ಪ್ರತಿಯೊಂದು ಶಿಕ್ಷಣಕ್ಷೇತ್ರ ಚಟುವಟಿಕೆ ಯೋಜನೆಯಲ್ಲಿ ಸರ್ವ ಗೃಹಗಳು, ತಮ್ಮ ಅಚಲ ಸಹಕಾರವನ್ನು ನೀಡಬೇಕು. ಇವತ್ತಿನ ಮಕ್ಕಳು ನಾಳಿನ ಪೌರಸ್ಥರು. ಅವರ ಮೇಲಿರುವ ಎಚ್ಚರ, ಜಾಗರೂಕತೆ, ನಮ್ಮ ಸ್ವತಂತ್ರ ರಾಷ್ಟ್ರದ ಭವಿಷ್ಯತ್ತಿನ ಭದ್ರತೆಗಾಗಿ ಎಂದು ನಾವು ತಿಳಿಯಬೇಕು.

ನಮ್ಮ ಸರಕಾರದ ಪಂಚವಾರ್ಷಿಕ ಯೋಜನೆಯಲ್ಲಿ ವಿದ್ಯಾಭಿವೃದ್ಧಿಗೆಂದು ೧೫ ಕೋಟಿ ರೂಪಾಯಿ ಖರ್ಚು ಮಾಡಲು ನಿಶ್ಚಯಿಸಿದ್ದು ತುಂಬಾ ಶ್ಲಾಘನೀಯವಾದದ್ದು. ತಲೆಯೊಂದರ ಐದು ವರ್ಷಗಳಿಗೆ ಬರೀ ನಾಲ್ಕು ರೂಪಾಯಿ ಬಂದರೂ ಏರುತ್ತಿರುವ ಜನಸಂಖ್ಯೆಯಲ್ಲಿ ಮತ್ತು ಆರ್ಥಿಕ ದುಸ್ಥಿತಿಯಿಂದ ಚೇತರಿಸಿಕೊಳ್ಳುತ್ತಿರುವ ನಮ್ಮ ಭಾರತದಲ್ಲಿ, ಈ ಮೊಬಲಗು ಗಮನಾರ್ಹವಾದದ್ದೇ ಸರಿ.

ಘನ್ಮ ಕೊಡಗಿನಲ್ಲಿ ಪ್ರಾರಂಭಿಸುವ ಸಾಮೂಹಿಕಾಭಿವೃದ್ಧಿ ಯೋಜಯಲ್ಲಿ ಶಿಕ್ಷಣ ರಂಗಕ್ಕೆ ಸಾಕಷ್ಟು ಹಣ ವಿನಿಯೋಗಿಟ್ಟಿದ್ದು ತುಂಬಾ ಸಂತೋಷಕರ. ಈ ಪವಿತ್ರ ಕಾರ್ಯದಲ್ಲಿ ನಮ್ಮ ಮನೆಗಳೆಲ್ಲಾ ಸಹಕರಿಸಿ ಮುಂದಿನ ಪೀಳಿಗೆಯನ್ನು ಯೋಗ್ಯರನ್ನಾಗಿ ಮಾಡಬೇಕು.

ಜೈ ಹಿಂದ್.